ಅಪರಂಜಿ

ಆಗಸ್ಟ್
1995

ಕಿಸಿನಗೆಯ ಕಾರಂಜಿ



* ಪ್ರಕಾಶ್
* ಶ್ರೀ .ಜಿ ವಿ. ಅರುಣ
* ಶಿವು
* ಎಂ. ಎನ್. ಕೆ.
* ಕಂಭಂ ಕೃಷ್ಣಮೂರ್ತಿ
* ವಸುಮತಿ ಉಡುಪ
* ಪ್ರಭಾ
* ಎಂ. ಆರ್. ವಿಶ್ವನಾಥರೆಡ್ಡಿ
* ನಾಗೂಶ್ರೀ ಸೂರಿ
* ಶಿವರಾಮು ಕಾರಂತ

ಬಿಡಿ ಪ್ರತಿ: 2 ರೂ. 50 ಪೈ.

ಸಂಪುಟ ೧೨ ಅಗಸ್ಟ್ ೧೯೯೫ ಸಂಚಿಕೆ ೧೧

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ :
2 ರೂ 50 ಪೈಸೆ
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ :
250 ರೂ.

ವಿಳಾಸ :
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8 ರಿಂದ
10 ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು - 560 003



ಪ್ರಕಾಶ್

"ಗೋಲಗುಂಬಜ್ ರೈಲು ದರೋಡೆ"
"ಶೇ 40ಕ್ಕೆ ಇಳಿದ ಅಪರಾಧ ಪ್ರಮಾಣ-ಸಿಂಧ್ಯ"
ಶೀರ್ಷಿಕೆಗಳನ್ನ ಅಕ್ಕ ಪಕ್ಕದಲ್ಲಿ ಹಾಕಬಾರದಿತ್ತು ! !

* * *

49 ಅಂಕ ಪಡೆದ ವಿದ್ಯಾರ್ಥಿಗೆ ವೈದ್ಯಕೀಯ ಸೀಟು

–ಸುದ್ದಿ

ಪಾಪ, ಅವನಿಗೆ ಪಾಠ ಹೇಳಿ ಕೊಡುವ ವೈದ್ಯರ ಪಾಡು ? ?

* * * *

ದೂರದರ್ಶನದಲ್ಲಿ ವಿಧಾನ ಮಂಡಲ ಕಲಾಪ

-ಸುದ್ದಿ

ರಸ್ತೇಲಿ ಹೋಗೋ.........ಮಾನೇಗೆ ಕರೆದಂತೆ ! !

* * * *

ರಾಷ್ಟ್ರಿಯ ಸರ್ಕಾರದ ಬಗ್ಗೆ ಹೆಗಡೆ ಹೇಳಿಕೆಗೆ ಪ್ರತಿಕ್ರಿಯಿಸಲು ಪ್ರಧಾನಿ ನಕಾರ

–ಪತ್ರಿಕೆ

ಇಷ್ಟು ಬೇಗ ಅವರು ಪ್ರತಿಕ್ರಿಯೆ (!) ತೋರಿಸಿದ್ದೇ ಆಶ್ಚರ್ಯ ! !

* * * *

ವಿದ್ಯಾ ಸಂಸ್ಥೆ ಹೆಸರಿನಲ್ಲಿ ಉದ್ಯಾನ ಕಬಳಿಕೆ

–ಪತ್ರಿಕೆ

ಆ ಶಾಲೆಯಲ್ಲಿ ಪರಿಸರದ ಬಗ್ಗೆ ಶಿಕ್ಷಣ ಕೊಡುವುದು ಸುಲಭ ! !

* * *

ನಿರ್ದೇಶಕ ಮಣಿರತ್ನಂ ಮೇಲೆ ಬಾಂಬ್

–ಸುದ್ದಿ

ಬಾಂಬೇ ! !

* * *

ಬೆಂಗಳೂರು ಸೌಂದರ್ಯ ಕಾಪಾಡಲು ದೇವೆಗೌಡ ಪಣ

–ಪತ್ರಿಕೆ

ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ.........! !

* * * *

ಕಬ್ಬಿನ ಸಿಪ್ಪೆಯಿಂದ ವಿದ್ಯುತ್ ಉತ್ಪಾದನೆಗೆ ಯೋಜನೆ

–ಸುದ್ದಿ

ಸಿಹಿ ಕನಸುಗಳು ! !

* * *

'ಓದುವ ಆಟ' ಪುಸ್ತಕದ ಬಗ್ಗೆ ವಾದ-ವಿವಾದ

–ಪತ್ರಿಕೆ

ಕಾರಂತರು ಖಾರಂತರಾದರಂತೆ ! !

* * *

ಕೃಷ್ಣಾ ಯೋಜನೆ ದೇವರು ಬಂದರೂ ಕ್ರಿ. ಶ. 2000ದ ಹೊತ್ತಿಗೆ ಸಾಧ್ಯವಿಲ್ಲ

-ಸುದ್ದಿ

ಸುದ್ದಿ ಓದಿ ಭಗವಂತ ಚಕಿತನಾದಂತೆ ! !

** ** ** **

'ವೀರಪ್ಪನ್ ಹಿಡಿದ್ರೆ.........'

ಶ್ರೀ ಜಿ. ವಿ. ಅರುಣ

'ಅಪ್ಪಾ, ಮುಂದಿನ ವಾರ ಸ್ಕೂಲ್ ಶುರು ಆಗುತ್ತೆ......

'ಹೌದು ಮರಿ, ಹೊಸ ಕ್ಲಾಸ್‌ನಲ್ಲಿ ಚೆನ್ನಾಗಿ ಓದ ಬೇಕು... ಒಂದು ದಿನಾನು ತಪ್ಪಿಸಿ ಕೊಳ್ಳದೆ ಸ್ಕೂಲಿಗೆ ಹೋಗ ಬೇಕು...'

'ಹೂಂನಪ್ಪ...'

'ಯಾವ ಟೆಸ್ಟ್‌ಗೂ ತಪ್ಪಿಸಿ ಕೊಳ್ಳದೆ ಒಳ್ಳೆ ಮಾರ್ಕ್ಸ್ ತೊಗೋ ಬೇಕು...'
'ಸರಿ ಅಪ್ಪ... ಅದೆಲ್ಲಾ ಮಾಮೂಲೀ......'

'ಅಂದ್ರೆ......!?'

'ಅದೇನಪ್ಪ ಪ್ರತಿ ವರ್ಷಾನು ಸ್ಕೂಲ್ ಪ್ರಾರಂಭ ಆದಾಗ ಇದನ್ನೆಲ್ಲ ನೀನು ಹೇಳೋದು... ನಾನು ಅದಕ್ಕೆ ಹೂಂ ಅನ್ನೋದು......'

'ಅಂದ್ರೆ......'

'ನಾನು ಅದಕ್ಕಲ್ಲಪ್ಪ ಕೇಳಿದ್ದು......'

'ಮತ್ಯಾವುದಕ್ಕೆ...?'

'ಸ್ಕೂಲ್ ಶುರು ಆದ್ಮೇಲೆ ಮೊರಾರ್ಜಿ ದೇಸಾಯಿ ಜ್ಞಾಪಕಾರ್ಥವಾಗಿ ರಜ ಕೊಡ್ತಾರ ಅಂತ...'

'ಈಗ್ಯಾಕೆ ರಜ ಆಗ್ಗೆ ಕೊಟ್ಟಿದ್ರಲ್ಲ......'

'ಅದೆಲ್ಲ ನಿಮಗಪ್ಪ, ನಮ್ಗೆ ಆಗ ಸ್ಕೂಲೇ ಇರಲಿಲ್ಲಪ್ಪ...! ಬೇಸಗೆ ರಜ ಬಂದ್ಬಿಟ್ಟಿತ್ತು......ಅದಕ್ಕೇ ಈಗ ಸ್ಕೂಲ್ ಶುರು ಆದ್ಮೇಲೆ ಕೊಡ್ತಾರೋ ಏನೋ ಅಂತ ಕೇಳ್ದೆ...'

'ಸ್ಕೂಲ್‌ಗೆ ಓದೋಕ್ಕೆ ಹೋಗೋದೋ......ರಜ ಬರುತ್ತೆ ಅಂತ್ಲೊ ? ......ಹಾಗೆಲ್ಲಾ ಯೋಚಿಸೋದೇ ತಪ್ಪು......'

'ಯಾಕೆ ಯೋಚಿಸ ಬಾರ್ದಪ್ಪ ?... ಪ್ರತಿ ವರ್ಷಾನು ಅಂಬೇಡ್ಕರ್ ಜಯಂತಿ ಬಸವ ಜಯಂತಿ, ಗುಡ್ ಫ್ರೈಡೆ ಇವೆಲ್ಲಾ ನಮಗೆ ಸ್ಕೂಲ್ ಇಲ್ಲದೇ ಇರೋವಾಗ್ಲೆ ಬರುತ್ತೆ...ಎಷ್ಟೊಂದು ಲಾಸ್ ಅಲ್ವೇನಪ್ಪ... ಇವುಗಳ ಜೊತೆಗೆ ಮೊರಾರ್ಜಿ...'

'ನೋಡು ಮರಿ, ಆಗ್ಲೆ ಹೇಳಿದ್ನಲ್ಲ...ಹಾಗೆಲ್ಲ ಓದೋ ಹುಡುಗ್ರು ಯೋಚಿಸಲೇ ಬಾರ್ದು... ನಿಮಗೆ ಹ್ಯಾಗೂ ಎರಡು ತಿಂಗಳು ಬೇಸಿಗೆ ರಜ ಇತ್ತಲ್ಲ ಅವೆಲ್ಲಾ ಬಂದಾಗ...!'

'ಸ್ಕೂಲಿದ್ದಾಗ ರಜ ಬಂದ್ರೇನೇ ಮಜ ಇರೋದು... ಹೋಗ್ಲಿ ಈಗ ವೀರಪ್ಪನ್ ಹಿಡಿದ್ರೆ ರಜ ಕೊಡ್ತಾರಾ...?'

'ಯಾಕೆ...!?!'

'ಯಾವಾಗ್ಲೋ ನರಕಾಸುರನ್ನ ಕೊಂದಿದ್ದಕ್ಕೆ ನರಕ ಚತುರ್ದಶಿಗೆ...ರಾವಣನ್ನ ಸೋಲ್ಸಿದ್ದಕ್ಕೆ ವಿಜಯದಶ್ಮಿಗೆ ರಜ ಕೊಡೋದಿಲ್ವ ಹಾಗೆ ಈಗ ಈ ಮಾಡರ್ನ್ ರಾಕ್ಷಸನ್ನ ಹಿಡಿದ್ರೆ, ಆ ವಿಜಯ ಸೆಲಬ್ರೇಟ್ ಮಾಡೋಕ್ಕೆ ಯಾಕೆ ರಜ ಕೊಡಬಾರ್ದು......?'

'ನೀನು ಹೇಳೋದ್ರಲ್ಲೂ ಒಂದರ್ಥ ಇದೆ ಮರಿ...ಹೇಳೋಕ್ಕಾಗಲ್ಲ ಸರಕಾರದೋರು ರಜ ಕೊಟ್ರೂ ಕೊಟ್ರೇ......!'

'ಹಾಗಾದ್ರೆ ಆ ವೀರಪ್ಪನ್ನ್ ಜೀವ ಸಹಿತ ಹಿಡೀಲೀ ಅಂತ ಪ್ರಾರ್ಥನೆ ಮಾಡ್ತೀನಿ...'

'ಯಾಕೆ...? !'

'ಒಡಿದ ಮೇಲೆ ಹೇಗಿದ್ದರೂ ರಜ ಕೊಡ್ತಾರೆ... ಎಂಥೆಂಥಾವರೋ ಜೈಲಿನಿಂದ ತಪ್ಪಿಸಿ ಕೊಂಡು ಓಡಿ ಹೋಗ್ತಾರೆ... ಅಂತಾದ್ರಲ್ಲಿ ವೀರಪ್ಪನ್ ಸುಮ್ಮನೆ ಇರ್ತಾನಾ...? ತಪ್ಪಿಸಿ ಕೊಂಡ ಮೇಲೆ ಇನ್ನೊಂದ್ಸಲ ಒಡೀತಾರೆ...... ಆಗ ಇನ್ನೊಂದು ದಿನ ರಜ......ಅದಕ್ಕೆ......!'

ಕಂಪ್ಯೂಟರ್ ಕಲಿಯಿರಿ

-ಶಿವು

ವಿಂಬಲ್ಡನ್ ವಿಮೆನ್ಸ್ ಫೈನಲ್ಸ್ ಪ್ರಯುಕ್ತ ಅಂದು ಸಂಜೆ ಕ್ಲಬ್ ಬಿಕೋ ಅಂತಿತ್ತು. ಮಿಡ್ಲ್ ಸ್ಕೂಲ್‌ನಲ್ಲಿ ಭೂಗೋಳ ಪಾಠದ "ಆಸ್ಟ್ರೇಲಿಯದಲ್ಲಿ ಜನ ಸಂಖ್ಯೆ ಕಡಿಮೆ, ಕುರಿಗಳು ಜಾಸ್ತಿ" ಎಂಬ ಮಾತನ್ನು ನೆನಪಿಗೆ ತರುತ್ತಿತ್ತು ಅಂದಿನ ಕ್ಲಬ್ ವಾತಾವರಣ. ನಾನು ಹೋಗುವ ಹೊತ್ತಿಗಾಗಲೇ, ರೆಡ್ಡಿ, ಕಿರಣ, ಭವಾನಿ ಇವರೆಲ್ಲಾ ಬಾರ್‌ನಲ್ಲಿ ಕೂತು ತೀರ್ಥ ಸ್ವೀಕಾರ ನಡೆಸಿದ್ದರು. ಈ 'ತೀರ್ಥ ಸ್ವೀಕಾರ' ಪದ ಪ್ರಯೋಗದ ಬಗ್ಗೆ ಒಂದೊಮ್ಮೆ ದೇವುಗೂ ರುದ್ರನಿಗೂ ವಾಗ್ವಾದ ವಾಗಿತ್ತು. ರುದ್ರ coin ಮಾಡಿದ್ದ ಈ ಪದವನ್ನ ದೇವು ತಿರಸ್ಕರಿಸಿ, 'ತೀರ್ಥ ಯಾತ್ರೆ' ಪದ ಹೆಚ್ಚು ಸೂಕ್ತ ಅಂತ ತನ್ನ ವಾದ ಮಂಡಿಸಿದ್ದ. ತೀರ್ಥ ತಗೊಂ ಡೋರು ತಮ್ಮ ಬಿಡು ನಾಲಿಗೆ ಮಾತುಗಳ ಮೂಲಕ ಒಂದು wool gathering ಯಾತ್ರೆ ಪ್ರಾರಂಭಿಸೋದ್ರಿಂದ ಇದೇ ಸರಿ ಅಂತ ಅವನ ಅನಿಸಿಕೆ. ಇರಲಿ. ಅಂದ ಹಾಗೆ ಭವಾನಿ ಹೆಸರು ಕೇಳಿದ ತಕ್ಷಣ ನಿಮ್ಮ ಕಲ್ಪನಾ ಲಹರಿ ಹರಿಯೋದಕ್ಕೆ ಮುಂಚೇನೆ ಹೇಳಿ ಬಿಡ್ತೇನೆ, ಭವಾನಿ ಶಂಕರ್ ಹೆಸರಿನ ಅಪ್ಪ ರೂಪ ಇದು.

"ನಿನ್ನ ಮಗಳು ಸ್ಮಿತಾ ಈಗೇನು ಮಾಡ್ತಾ ಇದ್ದಾಳೋ. ಮೊನ್ನೆ ಬಿ ಎಸ್ಸೀ ಮುಗಿಸಿದ್ಲು ಅಂತಾ ಇದ್ಯಲ್ಲಾ" ಕಿರಣ ರೆಡ್ಡಿನ ಕೇಳಿದೆ.

"ಕಂಪ್ಯೂಟರ್ ಕ್ಲಾಸ್ ಸೇರ್ಕೊಂಡಿದ್ದಾಳೆ. ಹಿಂದೆ ಹೆಣ್ಣುಮಕ್ಕಳನ್ನ ವಾದ್ಯ ನುಡಿಸ್ತೀಯಮ್ಮಾ ಅಂತ ಕೇಳ್ತಾ ಇದ್ರು. ಈಗ ಕಂಪ್ಯೂಟರ್ ನುಡಿಸ್ತೀಯಾಮ್ಮಾ ಅಂತ ಕೇಳ್ತಾರಲ್ಲಾ"

"ಬರ್ತಾ ಬರ್ತಾ ಕಂಪ್ಯೂಟರ್ ಜಾಡ್ಯ ಹೆಚ್ತಾನೇ ಇದ್ಯಲ್ಲಾ, ನಮ್ಮಂಥಾ ಕಂಪ್ಯೂಟರ್ ಅಜ್ಞಾನಿಗಳು ಇನ್ಮೇಲೆ ಮಾತಾಡ್ದೇ ಮೂಲೇಲಿ ಕೂತ್ಕೊ ಬೇಕಾ ಗುತ್ತೋ ಏನೋ"

ಕಿರಣ ಮಾತು ಮುಗಿಸೋದ್ರೊಳಗೆ ಭವಾನಿ,

"ಕಳೆದ ತಿಂಗಳು ನಮ್ಮ ಆಫೀಸಿಗೆ ಕಂಪ್ಯೂಟರ್ ತಗೊಂಡ ಮೇಲೆ ಒಂದು ಅಭಾಸ ಆಗ್ಹೋಯ್ತು" ಅಂತ ತನ್ನ ಕತೆ ಶುರು ಮಾಡ್ದ.

"ನೋಡ್ರೋ ನಿಮಗೆಲ್ಲಾ ಗೊತ್ತಿರೊ ಹಾಗೆ, ಹಳೇ ಮನೆಗಳನ್ನ ಕೊಂಡು, ಹೊಸದಾಗಿ ಫ್ಲಾಟ್ಸ್ ಕಟ್ಸಿ ಡೆವಲಪರ್ಸ್‌ಗೆ ಮಾರೋದು ನನ್ನ ರಿಯಲ್ ಎಸ್ಟೇಟ್ ದಂಧೆ, ಒಂದು ವಾರದ ಹಿಂದೆ ಮಲ್ಲೇಶ್ವರದಿಂದ ಭಾಗೀರತಮ್ಮ ಅನ್ನೋರು ನನ್ನ ಹತ್ರ ಬಂದಿದ್ರು, ಮನೆ ಮಾರಿಸ್ಕೊಡಿ ಅಂತ. ಧಡೂತಿ ಹೆಂಗಸು, ಅರವತ್ತು ಅರವತ್ತೈದು ವಯಸ್ಸಿರಬಹುದು, ಸಂಪ್ರದಾಯಸ್ಥೆ. ದುಡ್ಡಿದೆ ಅಂತ ಗರ್ವಾನೂ ಇತ್ತು ಅನ್ನಿ, ಮನೆ ಬಗ್ಗೆ ಆಕೆ ಕೊಟ್ಟ ಮಾಹಿತಿನೆಲ್ಲಾ ನನ್ನ ಅಸಿಸ್ಟೆಂಟ್ ಮಾಲಾಗೆ ಹೇಳಿ ಕಂಪ್ಯೂಟರ್‌ಗೆ ಹಾಕಿಸ್ದೆ. ನೆನ್ನೆ ಆಕೆ ಮತ್ತೆ ಬಂದಿದ್ರಂತೆ. ನಾನಿಲ್ದೇ ಇದ್ದಾಗ. ಮನೆ ಅಳತೆ ಸ್ವಲ್ಪ ವ್ಯತ್ಯಾಸ ಇದೆ ಬರ್ಕೊಂಬಿಡಮ್ಮಾ ಅಂತ ಮಾಲಾಗೆ ಹೇಳಿದ್ರಂತೆ. ಆ ಹುಡುಗಿ ಕಂಪ್ಯೂಟರ್ ನಲ್ಲಿ ಆಕೆ ಫೈಲ್ ತೆಗೆದ್ಲಂತೆ. ಭಾಗೀರತಮ್ಮ ಮಾನಿಟರ್ ನೋಡಿದ ತಕ್ಷಣ ಮುಖ ಕೆಂಪಾಗಾಗಿ ಕೋಪಿಸ್ಕೊಂಡು ಮಾತಾಡ್ದೇ ಹೊರಟು ಹೋದ್ರಂತೆ, ನಾನು ಬಂದ ಮೇಲೆ ಏನಾಯ್ತು ಅಂತ ಮಾಲಾನ ಕೇಳ್ದೆ. "ನನಗೇನು ಗೊತ್ತಿಲ್ಲಾ ಸಾರ್, ಮಾನಿಟರ್ ಸ್ಕ್ರೀನ್ ನೋಡಿದ ತಕ್ಷಣ ಕೋಪಿಸ್ಕೊಂಡು ಹೊರಟು ಹೋದ್ರು" ಅಂದ್ಳು. ನಾನೇ ಪುನಃ ಮಾನಿಟರ್ ನೋಡ್ದೆ, ಆಕೆ ಫೈಲ್ ಮೇಲೆ ದೊಡ್ಡದಾಗಿ BAGEERTI ಅಂತ ಇತ್ತು. ಯಾಕಮ್ಮಾ ಮಾಲಾ, ಪೂರ್ತಿ ಹೆಸರು ಬರೆದಿಲ್ಲಾ ಅಂತ ಕೇಳಿದ್ರೆ, ಫೈಲ್ ನೇಮ್ ಎಂಟು ಅಕ್ಷರಕ್ಕಿಂತ ಜಾಸ್ತಿ ಇರಕ್ಕಾಗೊಲ್ಲಾ ಸಾರ್. ಅಷ್ಟೂ ಗೊತ್ತಿಲ್ವೇ" ಅಂತ ಮಾಲಾ ಕಿಸಕ್ಕನೆ ನಕ್ಳು. ಈಗ ಗಿರಾಕಿಗಳ ನಿಜವಾದ ಹೆಸರಿನ ಬದ್ಲು ಕೋಡ್ ನೇಮ್ ಕೊಡಕ್ಕೆ ಶುರು ಮಾಡಿದ್ದೀನಿ" ಅಂತ ಭವಾನಿ.

ಅಷ್ಟು ಹೊತ್ತಿಗೆ ದೇವು, ಶಾಂತು ಇಬ್ರೂ ಬಂದು ನಮ್ಮ ಗುಂಪು ಸೇರಿದರು, ಶಾಂತು ಮಗ ಒಂದು ಕಂಪ್ಯೂಟರ್ ಏಜನ್ಸಿ ತೆಗೆದಾಗಿನಿಂದ ಶಾಂತೂನೆ ನಮ್ಮ ರೆಸಿಡೆಂಟ್ ಕಂಪ್ಯೂಟರ್ ಎಕ್ಸ್‌ಪರ್ಟ್.

"ಸರಿಯಾದ ಸಮಯಕ್ಕೆ ಬಂದೆ ಶಾಂತು, ಕಂಪ್ಯೂಟರ್ ಬಗ್ಗೆನೇ ಮಾತಾಡ್ತಾ ಇದ್ವಿ. ಕಂಪ್ಯೂಟರ್‌ನಿಂದ ಏನೇನು ಕೆಲಸ ಮಾಡ್ಕೊಬ್ದು ಹೇಳು" ಅಂತ ಕಿರಣ ಕೇಳಿದ.

"ಕಂಪ್ಯೂಟರ್ ಇದ್ರೆ ಯಾವ ಕೆಲಸ ಬೇಕಾದ್ರೂ ಮಾಡ ಬಹುದು" ಅಂತ ಶಾಂತು ಶುರು ಮಾಡೋದ್ರೊಳಗೆ, ಕಿರಣ ಮಧ್ಯೆ ಬಾಯಿ ಹಾಕಿ, "ಅದು ಸುಳ್ಳು ಕೆಲವು ಕೆಲಸಾನ ಮನುಷ್ಯರೇ ಮಾಡ್ಬೇಕಾಗುತ್ತೆ" ಅಂದ ಹೇಳಿ ಮಾಲಾ ತರಹ ಕಿಸಕ್ಕನೆ ನಕ್ಕ.

"ಕಿರಣ, ನಿನ್ನ ONE TRACK MIND ಗಿಷ್ಟು ಬೆಂಕಿ ಹಾಕ. ಯಾವ ಕೆಲಸ ಬೇಕಾದ್ರೂ ಅಂದ್ರೆ, ಅಂಕಿ, ಸಂಖ್ಯೆಗಳನ್ನುಪಯೋಗಿಸೋ ಲೆಕ್ಕಾ ಚಾರದ ಕೆಲಸ, ಪದಗಳನ್ನು ಕೂಡಿಸಿ ಮಾಡೋ word processing ಕೆಲಸ, ಹಾಗೂ ಚಿತ್ರಗಳನ್ನು ಬರೆಯೋ ಗ್ರಾಫಿಕ್ಸ್ ಕೆಲಸ ಇವನ್ನೆಲ್ಲಾ ಕ್ಷಣಾರ್ಧದಲ್ಲಿ ಮಾಡಿ ಮುಗಿಸ್ಬೋದು" ಅಂದ ಶಾಂತು.

"ಕಂಪ್ಯೂಟರಿನಿಂದ ಚಿತ್ರ ಬರೆಯುಕ್ಕಾಗುತ್ಯೇ ?" ರೆಡ್ಡಿಗೆ ನಿಜವಾಗ಼್ೂ ಕುತೂಹಲ,

"ಆಗ್ದೆ ಏನು, ಒಂದು ಗ್ರಾಫಿಕ್ ಇಮೇಜ್‌ನಿಂದ ಕಟ್ ಮಾಡಿ, ಇನ್ನೊಂದು ಗ್ರಾಫಿಕ್ ಇಮೇಜ್‌ಗೆ ಪೇಸ್ಟ್ ಮಾಡಿದ್ರೆ ಮುಗೀತು ಚಿತ್ರ ಸಿದ್ಧ."

"ಹಾಗಂದ್ರೇನೋ ನಿನ್ನ ಮಾತು ಮಿನಿಸ್ಟರ್ ಮಾತಿನ ತರಹ ಇದೆ. ಒಂದೂ ಅರ್ಥ ಆಗುಲ್ಲ"

"ನಾನು ಹೇಳ್ತೀನಿ ಕೇಳು ಕಿರಣ," ದೇವು ದನಿ ಕೇಳಿ ಎಲ್ಲರೂ ತಣ್ಣಗಾದರು. ದೇವು ಮಾತೂಂದ್ರೆ ಹಾಗೆ, Undivded Attention ನ ತಾನಾಗಿಯೇ ಕಮಾಯಿಸಿ ಬಿಡ್ತಿತ್ತು.

ದೇವು ಒಂದು ಗುಟುಕು ಬೀರು ಹೀರಿ

"ಶಾಂತು, ನೀನು ವಿಷಯ ತಿಳ್ಕೊಂಡಿದ್ರೂ ಕಮ್ಯೂನಿಕೇಷನ್ ಏನೇನೂ ಸಾಲ್ದು ಹಿಂದೆ ಬಿ. ಎಂ. ಶ್ರೀ ಹಾಡಿದ ಗೀತೆ ನೆನಪಿಲ್ವೇ,

"ಅವಳ ಒಡವೆ ಇವಳಿಗಿಟ್ಟು, ಇವಳ ಉಡುಗೆ ಅವಳು ತೊಟ್ಟು ನೋಡ ಬಯಸಿದೆ, ಹಾಡ ಬಯಸಿದೆ ಅಂತ. ಅದೇ ರೀತಿ, ನಿನಗೆ ಜುಹೀಛಾವ್ಲಾ ತಲೇನ ಮಾಧುರೀ ದೀಕ್ಷಿತ್‌ಗೆ ಅಳವಡಿಸಿ ನೋಡ್ಬೇಕು ಅಂದ್ರೆ ಕಂಪ್ಯೂಟರ್‌ಗಿಂತ ಬೇರೆ ಉಪಕರಣ ಇಲ್ಲ"

"ಆದ್ರೆ ಎಷ್ಟು ಜನಕ್ಕೆ ಜುಹಿ ಛಾವ್ಲಾ ತಲೆ ಬೇಕಾಗುತ್ತೆ ? ಕೆಲವ್ರು ಶಬಾನಾ...."

"ಸಾಕು ನಿಲ್ಸೋ, ಜುಹಿ ಛಾವ್ಲಾ ಒಂದು ಉದಾಹರಣೆ ಅಷ್ಟೆ. ಬೇಕಾದ್ರೆ ಪಿ. ವಿ. ನರಸಿಂಹರಾವ್ ತಲೇನ ಬೇಕಾದ್ರೂ, ಮಾಧುರಿಗೆ ಜೋಡಿಸ್ಬೋದು ಕಂಪ್ಯೂಟರ್ ತೀರಾ Emotionless, ಇಂಥದ್ದು ಬೇಡ ಅಂತ ಹೇಳೋಲ್ಲಾ"

"ದೇವು ಹೇಳಿದ ಮೇಲೆ ನನಗೆ ಅರ್ಥ ಆಯ್ತು, ದೇವು ಕಂಪ್ಯೂಟರ್ ಬಗ್ಗೆ ನಿನಗೆ ಗೊತ್ತಿರೋದೆಲ್ಲಾ ಹೇಳ್ಬಿಡ್ತೊ, ಚಿಕನ್ ಸಿಕ್ಸ್‌ಟಿಫೈವ್ ಕೊಡಿಸ್ತೀನಿ" ರೆಡ್ಡಿಯ ಜ್ಞಾನ ದಾಹ, ಅವನ ತೀರ್ಥ ದಾಹವನ್ನ ಮೀರಿಸಿತ್ತು,

"ಅದಕ್ಕೇನು ಹೇಳ್ತೀನಿ ಕೇಳಿ. ಮುಖ್ಯವಾಗಿ ಕಂಪ್ಯೂಟರ್ ಒಂದು ಸೃಜನ ಶೀಲ ಹತಾರ, ಅಂದ್ರೆ ಕ್ರಿಯೇಟಿವ್ ಟೂಲ್, ಅದರ ಹೆಗ್ಗಳಿಕೆ ಅಂದ್ರೆ, ಅದು ಮನುಷ್ಯನ ಮನಸ್ಸಿನ ಕ್ರಿಯನ ಪ್ರತಿ ಬಿಂಬಿಸುತ್ತೆ. ಒಂದು ಉದಾಹರಣೆ, ಬೆಳಗ್ಗೆ ಎದ್ದಾಗ ನಿನಗೆ ಸ್ವಲ್ಪ ಎದೆ ನೋವು ಕಾಣಿಸ್ತು, ಅಂತಿಟ್ಕೊ, ನಿನ್ನ ಮನಸ್ಸು ತಕ್ಷಣ ಒಂದು ಫೈಲ್ ಓಪನ್ ಮಾಡತ್ತೆ. ಹಾರ್ಟ್ ಅಟಾಕ್ ಅಂತ ಆ ಫೈಲಿನ ಹೆಸ್ರು, ದಿನ ಕಳೆದ ಹಾಗೆಲ್ಲಾ ಆ ಫೈಲ್ ನಿನ್ನ ದೇಹಾನೇ ಗಮನಿಸ್ತಾ ಇರತ್ತೆ. ಸ್ವಲ್ಪ ಎಡಗೈ ನೋವು. ತಗೋ ತಕ್ಷಣ ಆ ಮಾಹಿತಿ ಫೈಲ್‌ಗೆ ರವಾನೆ. ಸಂಜೆ ಡಾಕ್ಟರ್ ಹತ್ರ ಹೋಗಿ, ಅವ್ರು "ಬರೀ ಗ್ಯಾಸ್ ರೀ, ಜೆಲುಸಿಲ್ ತಗೊಳ್ಳಿ, ಸರಿ ಹೋಗತ್ತೆ" ಅಂತ ಹೇಳೊವರ್ಗೂ ಆ ಫೈಲ್ ಕ್ಲೋಸ್ ಆಗೋದೇ ಇಲ್ಲ. ಈ ರೀತಿ ಬೇರೆ ಬೇರೆ ತರಹದ ತೊಂದರೆ, ಆತಂಕ ಇದಕ್ಕೆಲ್ಲಾ ಬೇರೆ ಬೇರೆ ಫೈಲ್‌ಗಳು, Self Preservation Drive ನಲ್ಲಿ ಆರೋಗ್ಯದ ಆತಂಕದ ಫೈಲ್‌ಗಳು. Ambition Drive ನಲ್ಲಿ ಮಹತ್ವಕಾಂಕ್ಷೆಯ ಫೈಲ್‌ಗಳು ಹೀಗೆ ಬೇರೆ ಬೇರೆ Drive ಗಳಲ್ಲಿ ಬೇರೆ ಬೇರೆ ಫೈಲ್‌ಗಳು ಇರುತ್ತೆ, ಕಂಪ್ಯೂಟರ್ ನಲ್ಲಿ ಇದನ್ನೆಲ್ಲಾ A Drive, B Drive ಅಂತ ಕರೀತಾರೆ, ಮೊನ್ನೆ ನನ್ನ ಸೊಸೆ ಒಂದು ಕಂಪ್ಯೂಟರ್ ಖರೀದಿಸಿ ಮನೆಯಲ್ಲೇ ಇಟ್ಟಿದ್ದಾಳೆ, ಜಾತಕ ಬರೆಯೋ ಸಾಫ್ಟ್‌ವೇರ್ ಕೂಡಾ ಅದ್ರಲ್ಲಿದೆ. ವೈಜ್ಞಾನಿಕ ಮನೋಭಾವನೆ ಬೆಳೆಸೋಕ್ಕೆ ಉಳಿಸೋಕ್ಕೆ ಕಂಪ್ಯೂಟರ್‌ಗೀತ ಉತ್ತಮವಾದ ಸಾಧನ ಬೇರೆ ಇಲ್ಲ"

ರೆಡ್ಡಿ ಮೇಲೆ ದೇವು ಮಾತು ಪ್ರಭಾವ ಬೀರಿದ ಹಾಗೆ ಕಾಣಿಸ್ತು,

"ದೇವು, ನಾಳೆ ಭಾನುವಾರ ಹೇಗಿದ್ರೂ ರಜಾ- ಸಂಜೆ ಐದು ಘಂಟೆಗೆ ನಿಮ್ಮ ಮನೇಗೆ ಬರ್ತೀನಿ ಕಂಪ್ಯೂಟರ್ ತೋರಿಸ್ತೀಯ?" ಅಂತ ಕೇಳಿದ,

"ಐದು ಘಂಟೆಗೆ ಬೇಡ, ಆರುಘಂಟೆ ಮೇಲೆ ಬಾ, ನಾಲ್ಕೂವರೆಯಿಂದ ಆರರವರೆಗೆ ರಾಹು ಕಾಲ" ಅಂದ ದೇವು

"ಭಲೆ" ಎಂದೆ ನಾನು.

ವಾಚಕರ ಪತ್ರ

ಪ್ರಿಯ ಸಂಪಾದಕರು,
ಅಪರಂಜಿ,
ಬೆಂಗಳೂರು

ಜುಲೈ ತಿಂಗಳ ಸಂಚಿಕೆಯಲ್ಲಿ ಪ್ರಭಾ ಅವರ ಬ್ರೈನ್ ಸ್ಟಾರ್ಮಿಂಗ್ ಲೇಖನ ತುಂಬಾ ಚೆನ್ನಾಗಿತ್ತು. ಅವರ ಸಂಸ್ಥೆಯಲ್ಲಿ ಗುಣ ನಿಯಂತ್ರಣ ವೃತ್ತಗಳು ಅವರ ಕ್ಯಾಂಟೀನಿನಲ್ಲಿ ಕಾಗೆಗಳ ಉಪದ್ರವ ನಿವಾರಿಸುವಲ್ಲಿ ಯಶಸ್ವಿಯಾಗಿರುವುದು ನಿಜಕ್ಕೂ ಕುತೂಹಲಕಾರಿ. ಇದೇ ರೀತಿಯಲ್ಲಿ ಕ್ಯು ಸೀ ಸೀ (ಕ್ವಾಲಿಟಿ ಕಂಟ್ರೋಲ್ ಸರ್ಕಲ್) ಗಳು ನಮ್ಮ ಪೀ ಎಸ್ ಯೂ ಗಳಲ್ಲಿ ಇರುವ ಇನ್ನೂ ಅನೇಕ ಉಪದ್ರವಗಳನ್ನು ನಿವಾರಿಸುವುವೆಂದು ಹಾರೈಸೋಣವೇ ?

ಈ ಕ್ಯು ಸೀ ಸೀ ಗಳು ಜಪಾನಿನಲ್ಲಿ ೧೯೫೦ರಲ್ಲಿ ಶುರುವಾಗಿ ಅಲ್ಲಿ ಈಗ ಲಕ್ಷಾಂತರ ವೃತ್ತಗಳು ಕೆಲಸಮಾಡುತ್ತಿವೆಯೆಂದು ಕೇಳಿದ್ದೇವೆ ಮತ್ತು ಓದಿದ್ದೇವೆ. ಅಲ್ಲಿಯೂ ಇಲ್ಲಿನಂತೆ ಕ್ಯಾಂಟೀನುಗಳು ಇರಲೇಬೇಕು. ಅವುಗಳಿಗೂ ದೊಡ್ಡ ದೊಡ್ಡ ಬಾಗಿಲುಗಳು ಇರಬೇಕು. ಅಲ್ಲಿಯೂ ಇಲ್ಲಿನಂತೆ ಕಪ್ಪಗಿರುವ ಕಾಗೆಗಳಿದ್ದು ಅವೂ ಸದಾ ತುಂಬಾ ಹಸಿದಿರಬೇಕು. ಆ ಕಾಗೆಗಳಿಗೂ ಆ ದೊಡ್ಡ ದೊಡ್ಡ ಬಾಗಿಲು ಗಳಿಂದ ಕ್ಯಾಂಟೀನಿನೊಳಗೆ ನುಗ್ಗಲು ಅವಕಾಶವಿರಲೇಬೇಕು. ಆದರೂ ಈವರೆವಿಗೆ ಅಲ್ಲಿನ ಲಕ್ಷಾಂತರ ಕ್ಯು ಸೀ ಸೀ ಗಳಲ್ಲಿ ಒಂದೂ ಈರೀತಿ ಕಾಗೆ ನಿಯಂತ್ರಣ ಕಾರ್ಯ ಮಾಡಿದ ವರದಿ ಬಂದಿಲ್ಲ. ನಮ್ಮಲ್ಲಿರುವ ಅನೇಕಾನೇಕ ಕ್ವಾಲಿಟೀ ಧುರೀಣರು ಮತ್ತು ಮೇಧಾವಿಗಳು ಜಪಾನಿಗೆ ಅವರವರ ಕಂಪೆನಿ ಅಥವಾ ನಮ್ಮ ಸರ್ಕಾರದ ಖರ್ಚಿನಲ್ಲಿ ಹೋಗಿ ವಾಪಸ್ ಬಂದು ಅಮೋಘ ಭಾಷಣಗಳನ್ನು ಬಿಗಿದಿದ್ದಾರೆ, ಹಲವಾರು ಪುಸ್ತಕಗಳನ್ನು ಪ್ರಿಂಟಿಸಿದ್ದಾರೆ. ಅವರಾರೂ ಈ ಕಾಗೆ ನಿಯಂತ್ರಣದ ಬಗ್ಗೆ ಬರದೇ ಯಿಲ್ಲ. ಈ ದೃಷ್ಟಿಯಲ್ಲಿ ನೋಡಿದರೆ ಈ ನಮ್ಮ ಪ್ರಸ್ತುತ ವೃತ್ತವು ಸಾಧಿಸಿರು ವುದು ಮಹಾನ್ ಕಾರ್ಯವೆಂದು ಒಪ್ಪಿಕೊಳ್ಳಲೇಬೇಕು.

ನಮ್ಮ ಮಹಾನ್ ಮೇಧಾವಿಗಳ ಪ್ರಕಾರ ಈ ಕ್ವಾಲೀಟೀ ವೃತ್ತಗಳು ಮೊದ ಮೊದಲು ಆರಂಭ ಶೂರತ್ವ ತೋರಿಸಿ ಬರುಬರುತ್ತ ಉತ್ಸಾಹ ಹೀನರಾಗಿ ನಿಷ್ಕ್ರಿಯ ರಾಗುತ್ತಾರಂತೆ. ಈ ನಮ್ಮ ಪ್ರಸ್ತುತ ವೃತ್ತವು ಹಾಗಾಗದೆ ಏಕಲವ್ಯ-ವಿಕ್ರಮಾದಿತ್ಯ

ರಂತೆ ಅನೇಕ ಸೋಲುಗಳು ಬಂದರೂ ಎದೆಗುಂದದೆ ಏಕನಿಷ್ಠೆಯಿಂದ ತಮ್ಮ ಗುರಿ ಸಾಧಿಸಿದ್ದಾರೆ. ತುಂಬಾ ಸ್ತುತ್ಯಾರ್ಹ್ಯ, ಇವರಿಗೆ ನಮ್ಮ ಸರ್ಕಾರವು ಯಾವ ರೀತಿಯಲ್ಲಿ ಪುರಸ್ಕರಿಸುವುದೋ ಇದಿರು ನೋಡೋಣ.

ಈಗ ಈ ಬ್ರೈನ್ ಸ್ಟಾರ್ಮಿಂಗ್ ವಿಷಯಕ್ಕೆ ಬರೋಣ. ಇಲ್ಲೇಕೋ ನಮ್ಮ ವೃತ್ತವು ಸ್ವಲ್ಪಮಟ್ಟಿಗೆ ಎಡವಿದಂತಿದೆ. ಶುದ್ಧ ಮತ್ತು ಶಾಸ್ತ್ರೀಯ ಸಂಪ್ರದಾಯ ಮತ್ತು ಪದ್ಧತಿಯಂತೆ ಈ ಸ್ಟಾರ್ಮಿಂಗ್ ಅಥವಾ "ಮಂಥನದ" ಸಮಯದಲ್ಲಿ ವೃತ್ತದವರು ಇತರರನ್ನು ಆಹ್ವಾನಿಸಿ ಅವರಿಂದ ಸಲಹೆಗಳನ್ನು ಪಡೆಯಬಹುದು. ಇದಕ್ಕೆ ಕ್ವಾಲಿಟಿ ಗುರುಗಳ ಮತ್ತು ಮೇಧಾವಿಗಳ ಅನುಮೋದನೆಯೂ ಸಿಕ್ಕಿದೆ. ಕೈಗೆತ್ತಿಕೊಂಡ ವಿಷಯ ಅತೀ ಕ್ಲಿಷ್ಟವಾದ್ದಾಗ ಮತ್ತು ಕಬ್ಬಿಣದ ಕಡಲೆಯಾಗಿದ್ದಾಗ ಈ ಹಾದಿ ಅನಿವಾರ್ಯ. ಇದರಲ್ಲಿ ತಪ್ಪೇನಿಲ್ಲ. ಎಲ್ಲಾ ಸಮಸ್ಯೆಯನ್ನು ವೃತ್ತದವರೇ ನೀವಾರಿಸಬೇಕೆಂಬ ಹಠ ಸಲ್ಲ. ಈ ವಿಚಾರ ಸೂಕ್ಷ್ಮ ನಮ್ಮ ವೃತ್ತದವರ ಗಮನಕ್ಕೆ ಬಾರದಿದ್ದುದು ವಿಷಾದಕರ, ಹಾಗೇನಾದರೂ ಈ ವಿಷಯ ಅವರ ಗಮನಕ್ಕೆ ಬಂದಿದ್ದರೆ ಅವರು ಈ ಅವಕಾಶವನ್ನು ಖಂಡಿತ ಕಳೆದುಕೊಳ್ಳುತ್ತಿರಲಿಲ್ಲ. ಯಾರಾದರೂ ಶ್ರಾದ್ಧ ಮಾಡಿಸುವ ಪುರೋಹಿತರನ್ನು ಕಂಪೆನಿ ಖರ್ಚಿನಲ್ಲಿ ಆಹ್ವಾನಿಸಿ ಸೂಕ್ತ ದಕ್ಷಿಣೆ ನೀಡಿದ್ದರೆ ಕಾಗೆ ನಿಯಂತ್ರಣ ಸೂತ್ರ ಅತಿ ಸುಲಭವಾಗಿ ಮತ್ತು ನಿರಾಯಾಸವಾಗಿ ತಿಳಿದುಹೋಗುತ್ತಿತ್ತು. ಶ್ರಾದ್ಧ ಮಾಡಿಸಿ ಊಟಕ್ಕೆ ಕುಳಿತುಕೊಳ್ಳುವ ಮುಂಚೆ ಕಾಗೆಗಳಿಗೆ "ಉಚ್ಛಿಷ್ಟ ಪಿಂಡ" ವೆಂಬ ಅನ್ನದ ಉಂಡೆಯನ್ನು ಇತ್ತು ಆಮೇಲೆ ಇತರರು ಊಟಕ್ಕೆ ಕುಳಿತುಕೊಳ್ಳುವ ಸಂಪ್ರದಾಯ ನಮ್ಮ ಪೂರ್ವೀಕರಿಂದ ಇಳಿದುಬಂದಿದೆ. ಹಿಂದಿನಕಾಲದಲ್ಲಿ ಬಯಲಿನಲ್ಲಿ ಶ್ರಾದ್ಧಕಾರ್ಯವನ್ನು ಮಾಡಿಸುವಾಗ ಕಾಗೆಗಳ ಉಪಟಳವನ್ನು ನಿವಾರಿಸಲು ಹೂಡಿದ ಸಂಚಿಕೆ ಇದಿರಬಹುದು. ಈ ಸೂತ್ರವನ್ನು ಅಳವಡಿಸಿದ್ದರೆ ನಮ್ಮ ಕ್ವಾಲಿಟೀ ವೃತ್ತದವರಿಗೆ ಬೇರಿನ್ನಾವ ತ್ರಾಸವೂ ಬೇಕಾಗಿರಲಿಲ್ಲ. ನಾಯಿಗಳ ಕೈಲಿ ಕಚ್ಚಿಸಿಕೊಳ್ಳಬೇಕಿರಲಿಲ್ಲ. ಬಾಗಿಲುಕಾಯಬೇಕೀರಲಿಲ್ಲ. ದೊಡ್ಡ ದೊಡ್ಡ ತೋರಣಗಳ ತರಹ ಪರದೆಗಳನ್ನು ಇಳಿ ಬಿಡಬೇಕಿರಲಿಲ್ಲ. ಅಂಗೈ ಹುಣ್ಣಿಗೆ ಕನ್ನಡಿ ಯಾಕೆಬೇಕು ?

ನಮ್ಮ ಕೆಲಸಗಾರರು ಸೈರನ್ ಆದ ಕೂಡಲೇ ಓಡಿ ಬಂದು ತಟ್ಟೆ ಹಿಡಿದು ಊಟಕ್ಕೆ ಕೂಡುವ ಮುನ್ನ ಸ್ವಲ್ಪ ಕಾಗೆಗಳ ಬಗ್ಗೆ ಕಾಳಜಿ ವಹಿಸಿ ಯೋಚಿಸಿದ್ದರೆ ಚೆನ್ನಾಗಿರುತ್ತಿತ್ತು. ಈಡೆಮಾಕ್ರಸಿಯಲ್ಲಿ ಸ್ವಲ್ಪವಾದರೂ ಗಿವ್ ಎಂಡ್ ಟೇಕ್ ಅಥವಾ ಲಿವ್ ಅಂಡ್ ಲೆಟ್ ಲಿವ್ ಬೇಡವೆ ? ಈ ತತ್ತ್ವ ಅನುಸರಿಸದಿದ್ದರೆ ಬರಿ ಕಾಗೆ ಕಾಟ

ಪೋಂದೇ ಅಲ್ಲ ಇನ್ನೂ ಅನೇಕ ಕಾಟಗಳು ಮೆತ್ತಿಕೊಳ್ಳುವುದು ದಿಟ.

ನಮ್ಮ ಕಾಗೆಗಳಿಗೆ ಜಿಹ್ವಾ ಚಾಪಲ್ಯವಿದೆ ಎನ್ನುವುದಕ್ಕೆ ಇನ್ನೂ ಪುರಾವೆದೊರೆತಿಲ್ಲ. ಅವು ಯಾವ ತರೆಹೆಯ ಹಿತರಕ್ಷಣಾ ಸಮಿತಿಗಳನ್ನು ಇನ್ನೂ ರಚಿಸಿಲ್ಲ. ಅವು ನಮಗೆ ದಿನಂಪ್ರತಿ ಕೇಸರಿಭಾತು ಇಲ್ಲಾ ಮೈಸೂರು ಪಾಕು, ತೈರೋಡೆ, ಬಿಸಿ ಬಿಸಿ ಬೋಂಬಾಯಿ ಬೋಂಡಾ, ಮದ್ದೂರೊಡೆ, ಪೂರೀ ಪಲ್ಯ ಇತ್ಯಾದೀ ಇತ್ಯಾದಿ ಬೇಕೇ ಬೇಕೆಂಬ ಡಿಮಾಂಡ್ಸ್ ಇನ್ನೂ ಹಾಕಿಲ್ಲ. ಹೀಗಿರುವಾಗ ಸ್ವಲ್ಪ ಅನ್ನವನ್ನು ಕಾಗೆಗಳಿಗೋಸ್ಕರವೇ ಹೊರಗಿಟ್ಟು ಆಮೇಲೆ ನಮ್ಮ ಸ್ನೇಹಿತರು ಬುಂಜಿಸಿದ್ದರೆ ಈ ತಾಪತ್ರಯ ವಿರುತ್ತಿರಲಿಲ್ಲ.

ಇನ್ನು ಮುಂದೆಯಾದರೂ ಕ್ವಾಲಿಟಿ ವೃತ್ತದವರು ಸಂದರ್ಭೋಚಿತ ಸೂತ್ರಗಳನ್ನು ಅನುಸರಿಸಿ, ಶಾಸ್ತ್ರೋಕ್ತವಾಗಿ ಶಾಸ್ತ್ರಿಗಳನ್ನು ಆಹ್ವಾನಿಸಿ ತಮ್ಮ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಬುವರೆಂದು ಆಶಿಸುವ,

ಇತಿ ತಮ್ಮ ವಿಶ್ವಾಸಿ,

ಎಂ. ಎನ್. ಕೆ.

ಹಾದಿಯಲ್ಲಿ ಕೇಸಿಳಿದ್ದು

"ನೀವೇನೇ ಹೇಳಿ ರಾಯರೆ, ಕಾಲಕೆಟ್ಟೋಯ್ತು, ಈ ಎನ್ ರಾನ್, ಕೋಜೆನಿಟ್ರಿಕ್ಸ್ ಇವುಗಳ ವಿದ್ಯುತ್ತಿಗೆ ನಮ್ಮ ಶರಾವತಿ ವಿದ್ಯುತ್ತಿನ ಸೊಗಡು ಖಂಡಿತಾ ಇರೋದಿಲ್ಲ. ಅಲ್ದೆ ಈಗ ಸಂಜೆ ಎಂಟು ಘಂಟೆಗೆ ಕರಾರುವಾಕ್ಕಾಗಿ ಅರ್ಧ ಗಂಟೆ ಪವರ್ ಹೋದಾಗಲೇ ನಾನು ಟಿ. ಎಂ. ಮಾಡೋದು. ಈ ಬಿಳೀ ತೊಗಲಿನೋರು ಅದಕ್ಕೂ ಕಲ್ಹಾಕ್ತಾರಲ್ಲಾ ರೀ"

ಸುಧಾರಣೆ ಯಾರಿಗೆ ?

ಕಂಭಂ ಕೃಷ್ಣಮೂರ್ತಿ

ಹಳ್ಳಿಗೆ ಹೋಗುವ ಬಸ್ಸು ಹೇಗಿದ್ದರೇನು ಎನ್ನುವ ಮನೋಭಾವ ಸಾರಿಗೆ ಸಂಸ್ಥೆಯದೆಂದೇ ಕಾಣುತ್ತದೆ. ಬಸ್ಸು ಲೈನಿನ ಮೇಲೆ ಹೊರಡುವ ಮುನ್ನ ಅದರ ಎಲ್ಲಾ ಅವಯವಗಳೂ ಸರಿಯಾಗಿದೆಯೆ, ಅದರ ಹೊಟ್ಟೆ ಭರ್ತಿಯಾಗಿದೆಯೆ ಎಂಬುದನ್ನು ಡಿಪೋವಿನಲ್ಲಿ ತಪಾಸಣೆ ಮಾಡಿಸಿಕೊಂಡು ಬರುವುದು ಬಲು ಅಪರೂಪ. ಬಸ್ಸು ಯಾವ ದುಃಸ್ಥಿತಿಯಲ್ಲಿದ್ದರೂ ಹಳ್ಳಿಯ ಮಂದಿ ಕಾಳಜಿ ಮಾಡುವವರಲ್ಲ ಎನ್ನುವ ನಂಬಿಕೆ ಅವರದು. ಹಳ್ಳಿಯ ಜನಕ್ಕೆ ಸೀಟಿನಲ್ಲೇ ಕೂತು ಪ್ರಯಾಣ ಮಾಡಬೇಕೆಂಬೋ ಹಟವಿಲ್ಲ. ಒಳಭಾಗದಲ್ಲಿ ಜಾಗವಿಲ್ಲದಿದ್ದರೆ, ಟಾಪಿನ ಮೇಲೆ ಹತ್ತಿ ಚಕ್ಲ ಮಕ್ಲ ಹಾಕಿ ಕುಳಿತು ಯಾವ ಕಿರಿಪಿರಿಯೂ ಮಾಡದೆ ಆನಂದದಿಂದ ಪ್ರಯಾಣ ಮಾಡುತ್ತಿದ್ದರು. ಬಸ್ಸಿನ ಸ್ಥಿತಿಯನ್ನು ಕಟ್ಟಿಕೊಂಡು ಅಳುವುದಕ್ಕಿಂತ ಅದು ಊರಿನ ಜನವನ್ನು ತುಂಬಿಕೊಂಡು ಓಡಾಡಿಕೊಂಡಿದ್ದರೆ ಅಷ್ಟೇ ಸಾಕಾಗಿತ್ತು. ಹಳ್ಳಿಯವರ ಈ ಧೋರಣೆಯನ್ನು ಅರಿತಿದ್ದರಿಂದಲೋ ಏನೋ ಆ ಲೈನಿಗೆ ಹಾಕುವ ಬಸ್ಸಿನ ಮೇನ್‌ಟೈನೆನ್ಸ್ ಬಗ್ಗೆ ಸಾರಿಗೆ ಸಂಸ್ಥೆಯವರು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.

ಸರ್ಕಾರಿ ಖಾತೆಯೊಂದರಲ್ಲಿ ಅಂಡರ್ ಸೆಕ್ರೆಟರಿಯಾಗಿ ಶಿಸ್ತಿನ ಶಿಪಾಯಿಯಂತೆ ದುಡಿದು ಇತ್ತೀಚೆಗೆ ನಿವೃತ್ತರಾಗಿ ತಮ್ಮ ಸ್ವಂತ ಸ್ಥಳವಾದ ಮರಕುಂಟೆಗೆ ಮರಳಿದ್ದ ಶೇಷಯ್ಯನವರು, ಹಳ್ಳಿಯ ಸುಧಾರಣೆ, ಸಮಾಜಸೇವೆಗಳ ಬಗ್ಗೆ ಆಸಕ್ತಿ ತಳೆದಿದ್ದರು. ಹಳ್ಳಿಗೆ ಹಾಕುವ ಬಸ್ಸುಗಳ ಶೋಚನೀಯ ಸ್ಥಿತಿಯನ್ನು ಕಂಡು ಅವರು ಬಲು ಬೇಜಾರು ಮಾಡಿಕೊಂಡಿದ್ದರು. ಅವರು ಎಷ್ಟಾದರೂ ಕಾನೂನಿನ ಮಂದಿ, ಸಾರಿಗೆ ಸಂಸ್ಥೆಯವರು ಕಾನೂನನ್ನೇ ಮರೆತುಕೂತರೆ, ಶೇಷಯ್ಯನವರು ಬಾಯಿ ಮುಚ್ಚಿ ಕೂಡಲು ಬರುತ್ತದೆಯೇ ?

ಮಾಮೂಲಾಗಿ ಮೂರುಘಂಟೆ ಲೇಟಾಗಿ ಬಸ್ಸನ್ನು ತಂದು ನಿಲ್ದಾಣದಲ್ಲಿ ನಿಲ್ಲಿಸಿ ಟೀ ಕುಡಿಯಲು ಹೊರಟ ಚಾಲಕ ಹಾಗೂ ನಿರ್ವಾಹಕನನ್ನು ಅವರು ಒಂದು ದಿನ ಅಟಕಾಯಿಸಿಕೊಂಡರು. "ಯಾಕಯ್ಯಾ ಡಿಪೋನಲ್ಲಿ ಬಸ್ಸನ್ನ ಚೆಕ್ ಮಾಡಿಸಿಕೊಂಡು ಬರಲಿಲ್ಲ" ಎಂದು ಅವರು ದಬಾಯಿಸಿದರು. ಇದುವರೆಗೂ ಮರಕುಂಟೆಯ ಮಂದಿ ಇಂಥಹ ಪ್ರಶ್ನೆಯನ್ನು ಕೇಳಿರಲಿಲ್ಲವಾದ್ದರಿಂದ ಕಂಡಕ್ಟರ್ ಇವರ ಕಡೆ

ಹುಬ್ಬೇರಿಸಿ ನೋಡಿದ. ಬೀಡಿ ಎಳೆದು ಹೊಗೆ ಕಾರುತ್ತಿದ್ದ ಡ್ರೈವರು "ಯಾಕೆ ಏನಾಗೈತೆ ?" ಎಂದು ಗುಡುಗಿದ.

"ಕಿಟಕಿಗೆ ಗಾಜುಗಳಿಲ್ಲ. ಸೀಟೆಲ್ಲಾ ಕಿತ್ತು ಹೋಗಿದೆ, ಬಸ್ಸಿಗೆ ಬಾಗಿಲೇ ಇಲ್ಲ..." ಎಂದು ಶೇಷಯ್ಯನವರು ಎಲ್ಲ 'ಇಲ್ಲ'ಗಳನ್ನು ಪಟ್ಟಿ ಹಾಕುತ್ತಾ ಹೋದರು. ಇದನ್ನು ಕೇಳಿ ಸಾರಥಿ ಮತ್ತು ನಿರ್ವಾಹಕರು ಮುಸಿ ಮುಸಿ ನಕ್ಕರು, ಮೂಢ ಮತಿಯನ್ನು ಕಂಡು ಮೂದಲಿಸುವ ನಗೆ ಅದು.

"ಇದೆಲ್ಲಾ ಇದ್ರೇನು, ಓದ್ರೇನು. ಬಸ್ಸು ಐತೋ ಇಲ್ವೊ, ಬ್ಯಾಗ ಓಗಿ ಅತ್ಕೊಳಿ, ನಿಮ್ಮ ರಾಮಾಣ್ಯ ಕೇಳ್ತಾಕುಂತ್ಕೊಳ್ಳೋಕೆ ಟೇಮಿಲ್ಲ" ಎಂದು ಹೇಳಿ, ಟೀ ಕುಡಿದು ಮುಗಿಸಿ, ಬೀಡಿಯ ಕಡೆಯ 'ಧಂ' ಎಳೆದು ಬಿಸಾಕಿ, ಡ್ರೈವರು ಕಂಡಕ್ಟರು ಬಸ್ಸಿನ ಕಡೆ ಹೆಜ್ಜೆ ಹಾಕಿದರು.

"ಇದೆಲ್ಲಾ ಸರಿಯಾಗಿಲ್ಲದೆ ಬಸ್ಸನ್ನು ಓಡಿಸುವುದು ನಿಮ್ಮ ಸಾರಿಗೆ ಕಾನೂನಿಗೆ ವಿರುದ್ಧ ಅನ್ನೋದು ನಿಮಗೆ ತಿಳಿದಿದೆ ತಾನೆ. ಮೊದಲು ಇದನ್ನ ರಿಪೇರಿ ಮಾಡ್ಸಿ ಆಮೇಲೆ ಬಸ್ಸನ್ನ ಮುಂದಕ್ಕೆ ಬಿಡಿ" ಎಂದು ಕಾನೂನಿನ ಬಗ್ಗೆ ಅವರು ಹೇಳುತ್ತಿದ್ದು ದನ್ನು ಕಿವಿ ಮೇಲೆ ಹಾಕಿಕೊಳ್ಳದೆ, ಚಾಲಕ ಮತ್ತು ನಿರ್ವಾಹಕರಿಬ್ಬರು ಬಸ್ಸಿನಲ್ಲಿ ತೂರಿ ಕೊಂಡರು.

ಸಾರಿಗೆ ಮಂದಿಯ ನಡವಳಿಕೆಯನ್ನು ಕಂಡು ಶೇಷಯ್ಯನವರು ಕಿಡಿಕಾರಿದರು· ಬಸ್ಸಿನ ಮುಂದೆ ಅಡ್ಡಗಟ್ಟಿ ನಿಂತರು. ಬಸ್ಸಿನಲ್ಲಿ ಲವಲೇಶವೂ ಸ್ಥಳಬಿಡದೆ ತುಂಬಿ ಕೊಂಡಿದ್ದ ಮರುಕುಂಟೆ ಪ್ರಯಾಣಿಕರಿಗೆ, ಅವರ ಹಕ್ಕು ಭಾದ್ಯತೆಗಳ ಬಗ್ಗೆ ಕೂಗಿ ಹೇಳಿದರು. ಅವರ ಮಾತಿಗೆ ಯಾರೂ ಕಿವಿಗೊಡಲಿಲ್ಲ. ಹಳ್ಳಿಯ ಮಂದಿಗೆ ಊರು ಸೇರೋದು ಮುಖ್ಯವೇ ಹೊರತು, ಸೀಟುಗಾಜು ಕಟ್ಟಿಕೊಂಡು ಅವರಿಗೆ ಏನೂ ಆಗಬೇಕಾದ್ದಿರಲಿಲ್ಲ. ಕಾನೂನಿನ ಬಗ್ಗೆ ಶೇಷಯ್ಯನವರು ವಿವರಿಸಿದ್ದೆಲ್ಲಾ ಅರಣ್ಯ ರೋದನವಾಯಿತು. ಜನರ ಪ್ರತಿಕ್ರಿಯೆಯನ್ನು ಗಮನಿಸಿದ ಡ್ರೈವರು, ಕಂಡಕ್ಟರು ತಮಿಳು ಸಿನೆಮಾದ ಖಳನಾಯಕರಂತೆ ನಕ್ಕರು.

ನಿರ್ವಾಹಕ ರೈಟ್ ಕೊಟ್ಟಾಗ, ಚಾಲಕ ಬಸ್ಸಿನ ಮುಂದೆ ನಿಂತಿದ್ದ ಶೇಷಯ್ಯನವ ರಿಗೆ ಸೈಡು ಹೊಡೆದು ಗಾಡಿಯನ್ನು ಓಡಿಸಿದ. ರೂಲ್ಸು ರೆಗ್ಯುಲೇಶನ್‌ಗಳಿಗೆ ಇನ್ನೂ ಭದ್ರವಾಗಿ ಅಂಟಿಕೊಂಡಿದ್ದ ಶೇಷಯ್ಯನವರು ತಮ್ಮ ಗಂಟು ಮೂಟೆಗಳೊಡನೆ ಬಸ್ ಸ್ಟಾಂಡಿನಲ್ಲಿ ಅನಾಥರಾಗಿ ಉಳಿದರು. "ಸುಧಾರಣೆ ಬೇಕಾಗಿರುವುದು ಮರು ಕುಂಟೆ ಮಂದಿಗಲ್ಲ. ತಮ್ಮ ಮನೋಭಾವಕ್ಕೇ ಅದರ ಅವಶ್ಯಕತೆಯಿದೆ." ಎಂಬುದನ್ನು ಶೇಷಯ್ಯ ಬಲು ಲೇಟಾಗಿ ಅರ್ಥಮಾಡಿಕೊಂಡರು.

15

ರಿಪೇರಿ ರೀಪೆರಿ

ವಸುಮತಿ ಉಡುಪ

ಏನು ಕಾಣಿಸ್ತಾನೇ ಇರ್ಲಿಲ್ಲ ಅಂದ್ರಾ ? ಅಯ್ಯೋ, ನನ್ನ ಕತೆ ಯಾಕೆ ಕೇಳ್ತೀರಿ ? ಎಲ್ಲೋ ಜಾತಕದಲ್ಲಿ ಶನಿದೆಸೆ ಶುರುವಾಗಿರ್ಬೇಕು. ಅದೇ ನಂಗೆ ದುರ್ಬುದ್ಧಿ ಕೊಟ್ಟಿದ್ದು ಅಂತೀನಿ. ಇಲ್ದಿದ್ರೆ ಯಾವತ್ತೂ ಇಲ್ದಿದ್ದು ಮನೆಗೆ ಬಣ್ಣ ಹೊಡೆಸೋಣಾ ಅಂತ ಯಾಕೆ ಅನ್ನಿಸ್ಬೇಕು ? ಬಿದ್ದಿರ್ತಿತ್ತು. ಏಳೆಂಟುವರ್ಷದಿಂದ ಇರ್ಲಿಲ್ವಾ ? ಮದ್ವೆ ಇಲ್ಲ, ಮುಂಜಿ ಇಲ್ಲ. ಗ್ರಾಚಾರ ನೋಡಿ ಅದೇನೋ ಪ್ರೇರೇಪಣೆ ಆಗ್ಬಿಡ್ತು. ಬಣ್ಣ ಹೊಡೆಸೋದು ಅಂದ್ಮೇಲೆ ಸಣ್ಣಪುಟ್ಟ ರಿಪೇರಿ ಇದ್ದದ್ದು ಮಾಡ್ಸಿ ನೀಟಾಗಿ ಬಣ್ಣ ಹಚ್ಚಿಸೋದು ಅಂತ ಲೆಕ್ಕಹಾಕ್ದೆ. ಓವರ್‌ಹೆಡ್ ಟ್ಯಾಂಕು ತಟಾಪಟಾ ಸೋರ್ತಿತ್ತು. ಗಾರೆ ಕೆಲಸದೋನ್ನ ಕರೆಸಿದ್ರೆ ಅವನು ಇಡೀ ಟ್ಯಾಂಕನ್ನೇ ಒಡೆದು ಕಟ್ಬೇಕು ಅಂದ. ಯಾರಪಂದೇನು ಗಂಟು ? ಹತಾರಿ ಇದ್ದಿದ್ರೆ ಇದೆಲ್ಲಾ ಒಂದು ಕೆಲಸಾನಾ ? ನಾನೇ ಮಾಡ್ತಿದ್ದೆ ಬಿಡಿ. ನಮ್ಮನೆಯೋಳಿಗೆ ನನ್ನ ಇಂಥಾ ಮಾತು ಕೇಳಿದ್ರೆ ಉಡಾಫೆ. ಒಂಥರಾ ಕೊಂಕಾಗಿ ನಗ್ತಾಳೆ. ನಂಗ್ಲಿ ಬಿಡಿ, ನೋಡ್ದೋರು ಹಲ್ಲುಸೆಟ್ಟು ಚೆನ್ನಾಗಿದೆ ಅಂತಾರೆ. ರಿಪೇರಿ ವಿಷಯ ಏನಾಯ್ತು ಅಂತಿದೀರಾ ? ತಡೀರಿ. ಅದಕ್ಕೇ ಬರ್ತಿದೀನಿ. ಅವ್ರು ಹೇಳಿದ್ಮೇಲೆ ನಮ್ದೇನು ? ತಲೆ ಕುಣಿಸೋದು, ದುಡ್ಡು ಎಣಿಸೋದು, ಅಷ್ಟೇ. ಮನೆ ಎಲ್ಲಾ ಸಿಮೆಂಟಿನ ಧೂಳು, ಮರಳು. ಅಂತೂ ಕಟ್ಸೋಣ ಮುಗೀತೂಂತಾಯ್ತು. ಮರಗೆಲಸದ ಆಚಾರ್ರು ಬಂದ್ರು ಕಿಟಕಿ, ಬಾಗ್ಲು. ಒಂದೆರಡು ಕಡೆ ಟೊಳ್ಳು ಬಿಟ್ಕಂಡಿದ್ದೋ ಏನೋ ಮೇಲೆ ಗುದ್ದಿದ್ಹಾಗೆ ಧಪಾಧಪಾ ಗುದ್ದಿ ಟೊಳ್ಳಾಗಿದ್ದು ತೆಗೆದು ಹೊಸಾ ಪೀಸು ಜಾಯಿಂಟ್ ಮಾಡಿದ್ರು. ಈ ಶಕ್ತಿಪ್ರದರ್ಶನದಲ್ಲಿ ಕಿಟಕಿ ಗ್ಲಾಸು ಫಳಾರಂತ ಸೀಳ್ಕಂತು. ಅಕ್ಕಪಕ್ಕದ ಸಿಮೆಂಟ್ ಉದುರಿಬಿತ್ತು. ಮತ್ತೆ ಗಾರೆಯೋರನ್ನ ಕರೆಸಿ, ರಿಪೇರಿ ಮಾಡ್ಸಿ. ಕಿಟಕಿಗೆ ಗ್ಲಾಸು ಹಾಕ್ಸಿ. ಆಮೇಲೆ ಬಣ್ಣ ಬಳಿಯೋರು ರಂಗ ಪ್ರವೇಶ ಮಾಡಿದ್ರು. ಗೋಡೆ ಎಲ್ಲಾ ಕೆರೆದು, ಧೂಳಿನ ಮೋಡ ಎಬ್ಸಿ, ಸಿಕ್ಕಾಪಟ್ಟೆ ಸೀನು ಹೊಡೆಸಿ, ಮನೇ ಬಿಟ್ಟು ಮಾತ್ರ ಅಲ್ಲ, ಊರೇ ಬಿಟ್ಟು ಓಡಿಹೋಗೋಣ ಅನ್ನೋ ಹಾಂಗೆ ಮಾಡಿದ್ರು. ಡೈನಿಂಗ್ ಟೇಬಲ್ ಅಂದ್ರೆ ಟೇಬಲ್ಲು ಬೀರು ಅಂದ್ರೆ ಬೀರು, ಹತ್ತಿ ನಿಂತದ್ದೇ. ಬಣ್ಣ ಹೊಡೆದದ್ದೇ, ಸಾಲದ್ದಕ್ಕೆ ಅದನ್ನ ಧಡಾರ ಭಡಾರ ಅಂತ ನೆಲದ ಮೇಲೆ ಎಳೆದು, ಒಂದು ಕುರ್ಚಿ ಕಾಲು ಮುರೀದು. ನಾಲ್ಕು ಬಲ್ಬು ಪುಡಿಯಾದ್ವು. ಗಾಯದ ಮೇಲೆ ಬರೆ ಹಾಕ್ದಂಗೆ ಹಳೇ ನೆಲ ಗಾರೆ ಕಿತ್ಕಂಡು, ಮತ್ತೆ ಗಾರೆಯೋನ್ನ ಹುಡುಕಿ, ಅರೇ, ಎಲ್ಲಿ ಹೋದ್ರಿ ಮಾರಾಯಾ ? 'ಅಯ್ಯೋ ಪಾಪ' ಅಂತ ಎರಡು ಶಬ್ದ ಉದುರಿಸಿದ್ರೆ ಎಷ್ಟೋ ಸಮಾಧಾನ ಆಗ್ತಿತ್ತು. ಅದಕ್ಕೇನು ಕಾಸು ಕೊಡ್ಬೇಕಿತಾ ? ನೀವ್ವೊಳ್ಳೇ ಜನ...

ಆಕಳಿಕೆ !.........

ಪ್ರಭಾ

ಸಭೆಗಳಲ್ಲಿ ಭಾಷಣ ಬಿಗಿಯುವ ಗುಂಪಿಗೆ ಸೇರಿದ ಜನರನ್ನು ನಾನು ಬೋರಕರು ಎಂದು ಕರೆಯುವುದುಂಟು. ಸಖತ್ ಬೋರ್ ಹೊಡೆಸುವ ಜನ ಇವರಾದ್ದರಿಂದ ಅವರಿಗೆ ಈ ವಿಶಿಷ್ಟ ಹೆಸರಿನಿಂದ ಕರೆಯುವ ವಾಡಿಕೆ ಇದೆ. ಆದರೆ ಮನೇಲಿ ನಾಲ್ಕು ಗೋಡೆಗಳ ಮಧ್ಯ ಸಿಕ್ಕ ನಾಲ್ಕು ಜನರಿಗೆ ಕೊರೆವ ಜನರಿಗೆ ಏನನ್ನಬೇಕು ? ಆಗಾಗ ಮನೆಯವರನ್ನು ಸುತ್ತಲೂ ಸೇರಿಸಿಕೊಂಡು 'ಹರಟೆ' ಹೊಡೆಯುವ ವಾಡಿಕೆ ನಮ್ಮ ನೆರೆಯಾತನಿಗೆ ಇದೆ. ಆತ ಹೇಳಿ ಕೇಳಿ ರೀಟೈರ್ಡ್ ಆದ ವ್ಯಕ್ತಿಯಾದ್ದರಿಂದ ದೀರ್ಘ ವಾದ ಇತಿಹಾಸ ವಿರುವ ವ್ಯಕ್ತಿ ಮತ್ತು ಈ ದೀರ್ಘ ಇತಿಹಾಸ ಮತ್ತು ನೆನಪು ಗಳನ್ನು ಹಂಚಿಕೊಳ್ಳುವ ವ್ಯಕ್ತಿಗಳು ನೂರಕ್ಕೆ ನೂರಹದಿಮೂರರಷ್ಟುಸಲ ಎದುರು ಕುಳಿತ ಕೇಳುಗರ ಮುಖ ನೋಡುವುದಿಲ್ಲ. ಬದಲಿಗೆ ಕಣ್ಣು ಮುಚ್ಚಿ ತಮ್ಮ ನೆನಪಿನ ಸುರುಳಿ ಬಿಚ್ಚಿದರು ಅಂದರೆ ಕನ್ನಡ ಪತ್ರಿಕೆಗಳಲ್ಲಿನ ತೆಲುಗು ಧಾರಾವಾಹಿಗಳ ಹಾಗೆ ಅಡೆತಡೆ, ನೀತಿನಿಯಮ, ಕಂಟ್ರೋಲುಗಳಿಲ್ಲದೇ ಇವರ ವಾಗ್ ಪ್ರವಾಹ ನಡೆಯು ತ್ತದೆ.

ಇಂತಹ ಒಂದು ಅಪೂರ್ವವಾದ ದೃಶ್ಯವನ್ನು ಮೊನ್ನೆ ನೋಡಿ ಸೆರೆಹಿಡಿದೆ. ನೆರಮನೆಯ ಪಾಟ (ತಮಿಳಿನಲ್ಲಿ ಅಜ್ಜಿಗೆ 'ಪಾಟಿ' ಎನ್ನುತ್ತಾರಂತೆ, 'ಪಾಟಿ'ಯು ಪುಲ್ಲಿಂಗ ಪಾಟ ಇರಬಹುದೇ ? ನನಗೆ ತಿಳಿಯದು) ಸುತ್ತಲೂ ಮನೆಮಂದಿಯನ್ನು ಕೂರಿಸಿಕೊಂಡು ನಮ್ಮ ಇಡೀ ರಸ್ತೆಗೆ ಕೇಳಿಸುವ ಜೋರು ಧ್ವನಿಯಲ್ಲಿ 'ಆಯಿರತ್ತ ಒಂದುನೂರ ಅರವತ್ತೆರಡಲೆ ಎನ್ನ ಆಚೆ ಆನ್ನಾಕ...ಅಂತ ಆತ್ಮ ಚರಿತ್ರೆ ಆರಂಭಿ ಸಿದ್ದ.

ಹೇಳಿಕೇಳಿ ನನಗೂ ತಮಿಳು ಭಾಷೆಗೂ ಲ್ಯಾಟಿನ್ ಮತ್ತು ಫ್ರೆಂಚ್‌ಭಾಷೆಗಳ ಸಂಬಂಧ. ಒಂದೇ ಒಂದು ಪದ ನನ್ನ ತಲೇಲಿ ಹೋಗೋಲ್ಲ, ಆದರೂ ಈ ಭಾಷಿಗರು ಬಾಯಿನಿಂದ ಅದ್ಹೇಗೆ ಇಂತಹ ಢಂ ಢಂ ಎಂಬ ಶಬ್ದಗಳನ್ನು ಹೊರಡಿಸುತ್ತಾರೆ ಎಂಬ ಕುತೂಹಲದಿಂದ ಅವರೆಡೆಗೆ ಆಗಾಗ್ಗೆ ಕಿವಿ ಹರಿಸುತ್ತೇನೆ. ಕಳೆದ ತಿಂಗಳು ಇದೇ ರೀತಿ ಯಾರೋ ತಮಿಳರು ನನಗೂ ತಮಿಳು ತಿಳಿಯುತ್ತದೆ. ಎಂಬ ನಂಬಿಕೆ ಯಿಂದ ಮಾತು ಆರಂಭಿಸಿದರು. ನಾನು ಅವರ ಹಾವಭಾವ ಕೈಕಾಲು ಆಡಿಸುವಿಕೆ, ಮೂತಿಸೊಟ್ಟಸುವಿಕೆ ಇವುಗಳನ್ನು ನೋಡುತ್ತಾ ಅರ್ಧಘಂಟೆ ಕಳೆದೆ. ಅವರೇನೋ

ಪ್ರಶ್ನೆ ಕೇಳಿದರು ಎಂದು ತೋರುತ್ತೆ. ನನಗದು ಅರ್ಥವಾಗಲಿಲ್ಲ. 'ಬೆಂಗಳೂರಲೇ ಇರ್ಕೆ ತಮಿಳುವರಾದಾ ?' ಎಂದು ಒಂದು ಹುಳವನ್ನು ನೋಡುವ ಹಾಗೆ ನನ್ನನ್ನು ನೋಡಿ ಅವರು ದುಢ ದುಢ ನಡೆದು ಬಿಟ್ಟರು.

ಪಕ್ಕದ ಪಾಟ ತನ್ನ ಆತ್ಮ ಚರಿತ್ರೆಯ ರೀಲು ಸುರಳಿಬಿಚ್ಚಲು ಆರಂಭಿಸಿದ ಎರಡೇ ನಿಮಿಷದಲ್ಲಿ ಎದುರು ಕುಳಿತ ಶ್ರೋತೃಗಳಿಂದ ಆಕಳಿಕೆ ಆರಂಭವಾಯಿತು. ಮೊದಲು ಪಾಟನ ಹಿರಿಯಮಗ ಆಕಳಿಸಿದ, ನಂತರ ಆತನ ಹೆಂಡತಿ, ಅದರ ನಂತರ ಹೆಂಡತಿ ತಂಗಿ ಅದರ ನಂತರ ಮೂರು ಮಕ್ಕಳು ಇಪ್ಪತ್ತು, ಹದಿನೇಳು, ಹದಿನಾಲ್ಕರವು. ಹೀಗೆ ಆಕಳಿಕೆ ಆರಂಭವಾದುದ್ದು ನಂತರ ಲಯಬದ್ಧವಾಯಿತು. ಅಂದರೆ ಇದೇ ಆರ್ಡರಿನಲ್ಲಿ ಅಷ್ಟೇ ಸಮಯದ ಅಂತರದಲ್ಲಿ ಇವರುಗಳು ಆಕಳಿಸಲು ಆರಂಭಿಸಿದರು. ಭೋಗರತೆ ಮುಂದುವರೆದ ಹಾಗೆ, ಸಂಗೀತ ಕಛೇರಿಗಳಲ್ಲಿನ ತನಿ ಕಛೇರಿಯ ಮಧ್ಯಮಾವಸ್ಥೆಗೆ ಬಂದಂತಹ ಅನುಭವ ಆಯಿತು. ಆಕಳಿಕೆಗಳು ತೀರ ಹತ್ತಿರ ಹತ್ತಿರವಾದವು. ಮತ್ತೂ ಕೊಂಚ ಹೊತ್ತಿನ ನಂತರ ಈ ತನಿ ಕಛೇರಿಯ ಅಂತಿಮ ಹಂತದ ಲಕ್ಷಣಗಳು ತೋರಲಾರಂಭಿಸಿತು. ಅಂದರೆ ಪಿಟೀಲು, ಘಟಂ, ತಂಬೂರಿ, ಹಾರ್ಮೋನಿಯಂ ವಾದಕರುಗಳು ಜೀವಮಾನ ಪೂರ್ತಿ ತಮಗೆ ಅವಕಾಶಗಳೇ ಸಿಗದು ಎಂದು ಪೈಪೋಟಿಗಳ ಮೇಲೆ ತಂತಮ್ಮ ವಾದ್ಯಗಳ ಮೇಲೆ ಕೈಯ್ಯಾಡಿಸುತ್ತಾರೆ ನೋಡಿ ಹಾಗೆ ಎಲ್ಲ ಶ್ರೋತೃಗಳೂ ಲಯತಪ್ಪಿ ಅಡ್ಡಾದಿಡ್ಡಿ ಆಕಳಿಸಲು ತೊಡಗಿದ್ದರು.

ಅದೇ ಸಂಧರ್ಭದಲ್ಲಿಯೇ ಈ 'ಪಾಟ'ನ ಮಾತುಗಾರಿಕೆಯೂ ಒಂದು ಒಳ್ಳೇ ಗತ್ತಿನಲ್ಲಿ ಮುಂದುವರೆದಿತ್ತು. ಒಂದುನೂರ ಅರವತ್ತರ ನವಂಬರ್'ಗೆ ಬಂದಿದ್ದ ಹಾವಭಾವ ಸಮೇತ ಮೂತಿಯನ್ನು ಎಷ್ಟು ವಿಕಾರಮಾಡಬಹುದೇ ಅಷ್ಟು ವಿಕಾರ ಮಾಡಿಕೊಂಡು ಕತ್ತಿನ ನರಗಳನ್ನುಬ್ಬಿಸಿ ಈತ ತನ್ನ ಜೀವನಚರಿತ್ರೆ ಹರವಿ ಹರವಿ ಇಡುತ್ತಿದ್ದ. ಪಾಟನ ಮೊದಲನೇ ಮಗ ಹಾಗೇ ಓಂದಕ್ಕೆ ಒರಗಿ ಗೊರಕೆ ಪ್ರಾರಂಭಿಸಿದ ಅದಾದ ಎರಡೇ ನಿಮಿಷದಲ್ಲಿ ಪಾಟನ ಹಿರೀಸೊಸೆ ಹಾಗೇ ಅಡ್ಡಾದಳು. ಪಾಟ ಕಣ್ಣು ಮುಚ್ಚಿಕೊಂಡು ತನ್ನ ಕತೆ ಮುಂದುವರೆಸೇ ಇದ್ದ...

ಕೊನೆಗೂ ಗೆದ್ದವನು ಪಾಟನೇ ! ಆತನ ಇಡೀ ಸಂಸಾರವನ್ನು ಆಕಳಿಕೆಯ ಮೋಡಿಗೆತಳ್ಳಿ ಈತ ವಿಜೃಂಭಿಸಿದ ಮತ್ತು ಈತನ ಆತ್ಮಚರಿತ್ರೆಯ ಒಂದು ಕುತೂಹಲಕರ ಘಟ್ಟದಲ್ಲೋ ಅಥವಾ ಇಷ್ಟು ಭೋಗರತೆದವಂತರದ ಎಪಿಸೋಡಿನ ಆರಂಭವೋ ಆದಾಗ ಕಣ್ಣು ತೆರೆದ ತನ್ನ ಶ್ರೋತೃ ಮಹಾಜನರು ಪಾಂಡವರ ಕೈಲಿಂದ ಹತರಾದ

ಕೌರವರ ಸೈನಿಕರ ಹಾಗೆ ಬಿದ್ದಿರುವುದು ಕಂಡ, ಅಥವಾ ಈಚೆಗಿನ ತಮಿಳರ ಅಲ್ಲ ಸಾರಿ ತಮಿಳರ ಈಚೆಗಿನ 'ಅಮ್ಮಾ'ವಿನ ಎದುರು ಕೈಕಾಲು ಕತ್ತರಿಸಿಕೊಂಡು ಬಿದ್ದಿರುವ ವಿರೋಧ ಪಕ್ಷದವರು ಅಲ್ಲಿ ಬಿದ್ದ ಹಾಗೆ ಪಾಟನ ಕಣ್ಣಿಗೆ ಕಾಣಿಸಿರಬೇಕು. ಛೇ ಅವೆ ಪಾವಿ...ಎಂದು ಯಾರನ್ನೋ ಬೈದ ಸುತ್ತಲೂ ನೋಡಿದ.

ಅವನ ಕಣ್ಣಿಗೆ ನಾನೇ ಬೀಳಬೇಕೇ ? ಓಹೋ ವಾದ್ಯಾರುಗಳೇ ವಣಕ್ಕು ವಣಕ್ಕು ವಾಚಾರ್ ವಾಚಾರ್ ಅಂದ.

ಇಷ್ಟು ಹೊತ್ತೂ ಎದುರು ಕುಳಿತ ಒಂದು ಸಭೆಯನ್ನೇ ಆಕಳಿಕೆಯ ಸಮ್ಮೋಹನಾಸ್ತ್ರಕ್ಕೆ ಒಳಗಾಗಿಸಿದ್ದು ಅಲ್ಲದೆ ಅವರಿಗೆ 'ಮುತ್ತು' ಬರಿಸಿದಾತ ಇವನು ಆದರೂ ಧ್ವನಿಯಲ್ಲೆ ಆಗಲಿ, ನಡವಳಿಕೆಯಲ್ಲೇ ಆಗಲಿ ಒಂದೇ ಒಂದು ತೃಣಮಾತ್ರವಾದ ಆಯಾಸವನ್ನೂ ತೋರದೇ ಅದೇ ಮೊದಲಿನ ಉತ್ಸಾಹದಿಂದ ಹೊಸ ಬೇಟೆಯನ್ನು ಅರಸುತ್ತಾ ವಾಚಾರ್ ವಾಚಾರ್ ಎಂದೆನ್ನುತ್ತಿರುವನಲ್ಲ ಎಂದು ಅವನ ಬಗೆಗೆ ಅಭಿಮಾನ ಉಂಟಾಯಿತು. ನಿಂತಲ್ಲೇ ನಿಂತಿದ್ದೆ ಮತ್ತೆ ವಾಚಾರ್ ವಾಚಾರ್ ಎಂದು ಕೈ ಆಡಿಸಿದ. ಮುತ್ತೂ ಹಾಗೇನಿಂತೆ. ನನಗೆ ಕಿವಿಕೇಳಿಸುತ್ತಿಲ್ಲ ಎಂಬ ಭಾವನೆ ಅವನಿಗೆ ಬಂದಿರಬೇಕು. ಅದೇನೋ ಒದರಿದ. ಮತ್ತೆ ತೆಪ್ಪಗೆ ಹಾಗೇ ನಿಂತಿದ್ದೆ

ಅವನು ಎದ್ದು ನನ್ನ ಹತ್ತಿರ ಬರಲು ಆರಂಭಿಸಿದ, ಇದ್ದಕ್ಕಿದ ಹಾಗೇ ನನ್ನ ತಲೇಲಿ ಒಂದು ಯೋಚನೆ ಹೊಳೆಯಿತು. ಇವನ ಬಾಯಿ ಮಾತನಾಡುವವರೆಗೆ ಇವನಿಗೆ ಅವಕಾಶ ಕೊಟ್ಟು ನಂತರ ಈತ ಮಾತು ನಿಲ್ಲಿಸಿ ಹೋಗುವ ಹಾಗೆ ಮಾಡಿದರೆ ಹೇಗೆ ? ಎಂಬುದೇ ಆ ಯೋಚನೆ. ಅದೇ ಸಮಯದಲ್ಲಿ ಈತನ ಮಾತನ ಭೋರ್ಗರೆತಗಳಿಗೆ ಆಕಳಿಸಿ ಆಕಳಿಸಿ ನಾನೂ ಕೌರವನ ಸೈನಿಕರ ರೀತಿ ಆದರೆ ಎಂಬ ಪೂರ್ವಾನುಭಯವೂ ಉಂಟಾಯಿತು. ಭಯವನ್ನ ಒತ್ತಟ್ಟಿಗೆ ಸರಿಸಿದೆ.

ಮನಸ್ಸಿನಲ್ಲೇ ಒಂದು ಯೋಜನೆ ರೂಪಿತವಾಯಿತು. ಪಾಟನನ್ನು ಮಾತನಾಡಲು ಬಿಡುವುದು ಮತ್ತು ನಾನು ತೆಪ್ಪಗೆ ಕೂರುವುದು. ಪಾಟ ಮಾತು ಆಡಿ ಆಡಿ ಆಡಿ ತೆಪ್ಪಗಾಗುವವರೆಗೂ ನಾನು ತೆಪ್ಪಗಿರುವುದು. ಪಾಟ ಹತ್ತಿರದಿಂದ "ಎಂದ ಊಡು ?" ಅಂದ ಸುಮ್ಮನೆ ನಕ್ಕೆ, ವಾ ಪೇ ಚಲಾ......ಅಂದೆ ಮತ್ತೊಮ್ಮೆ ಹಲ್ಲು ಕಿಸಿದೆ. ನನ್ನೆದುರಿನ ಕಾಂಪೌಂಡ್ ಗೋಡೆಗೆ ಒರಗಿ ಆತ ಕೂತ. ನಾ ಇಂಗೇ ತಾ ಇರ್ಕೆ

ಅಂದ. ಮತ್ತೂ ಸುಮ್ಮನಿದ್ದೆ. ಜೊಂಗ್ಲೊ ಎಂಗ ವೀಟ್ಟು ಆಳು ಅಂತ ಅತ್ತ ಕೈ ತೋರಿಸಿದ ನಾ ಸರ್ವಿಸಲೆ ಇರಂಪೋದು ಆಯಿರತ್ತ ಒಂಬದುನೂರು ಅಂಬದೆಂದು ಸೆಪ್ಟಂಬರ್‌ಲೇ ಎನ್ನಾ ಆಚಿ ತೆರೆಮಾ...ಅಂತ ಆರಂಭಿಸಿದ. ಕತೆ ಹೇಳಿ ಕೊಳ್ಳಲಿ ಅಂತ ತೆಪ್ಪಗಿರುವುದನ್ನು ಮುಂದುವರೆಸಿದೆ.

ಆತನ ಆತ್ಮ ಚರಿತ್ರೆ ಅಮೋಘವಾಗಿ ಮುಂದುವರೆಯಿತು. ಕಿವಿಮೇಲೆ ಸಿಡಿಲು ಢಮಾರ್ ಢಮಾರ್ ಎಂದು ಬೀಳುತ್ತದೆ. ಎಂದೆನಿಸಲು ಎರಡೇ ನಿಮಿಷ ಸಾಕಾಯಿತು. ಕಿವಿ ತಮ್ಮಟೆ ಕಿತ್ತು ಹೋಗುತ್ತದೆ. ಎನಿಸಿದಾಗ ಕೈಕಾಲು ನೋಯಲು ಆರಂಭ ಆಯಿತು. ಪಾಟನ ಪಕ್ಕ ಕುಳಿತೆ ಮತ್ತೆ ಅರ್ಧ ನಿಮಿಷದಲ್ಲಿ ಕುಳಿತೇ ಒರಗಬೇಕು ಅನಿಸಿತು. ಕುಳಿತೇ ಒರಗಿದೆ. ಮತ್ತೆ ಹದಿನೈದೇ ಸೆಕೆಂಡಿನಲ್ಲಿ ಮೊದಲ ಆಕಳಿಕೆ ಬಂದಿತು. ಅಟ್ ಲೀಸ್ಟ್ ಸಾವಿರ ಆಕಳಿಕೆ ಬರುವವರೆಗಾದರೂ ಈತನ ಮಾತು ಕೇಳತಕ್ಕದ್ದು ಎಂದು ನಿರ್ಧರಿಸಿಕೊಂಡು ನನ್ನ ಆಕಳಿಕೆಗಳ ಲೆಕ್ಕ ಆರಂಭಿಸಿದೆ. ಹನ್ನೆರಡನೇ ಆಕಳಿಕೆ ಎಣಿಸುವ ವೇಳೆಗೆ ಆಕಳಿಕೆಗಳ ಲೆಕ್ಕ ತಪ್ಪಿತು. ಹದಿಮೂರನೆಯದೊ ಹನ್ನೊಂದನೇಯದೂ ಅಥವಾ ಹದಿನಾರನೇಯದೂ ತಿಳಿಯಲಿಲ್ಲ. ಲೆಕ್ಕಸರಿಪಡಿಸುವಷ್ಟರಲ್ಲಿ ಮತ್ತೆ ಆರೇಳ ಆಕಳಿಕೆಗಳನ್ನು ಆಕಳಿಸಿಯಾಗಿತ್ತು. ಇಪ್ಪತ್ತೈದು ಆಕಳಿಕೆ ತಡೆದುಕೊಳ್ಳುವುದು ಕಷ್ಟ ಅನಿಸಿದಾಗ ಸಾವಿರ ಆಕಳಿಕೆಗಳ ಲಿಸ್ಟನಿಂದ ನೂರಕ್ಕೆ ಬಂದೆ. ಇಪ್ಪತ್ತೈದನೇ ಆಕಳಿಕೆ ಲೆಕ್ಕ ಮತ್ತೆ ತಪ್ಪಿತು. ಲೆಕ್ಕ ಸರಿಪಡಿಸಿಕೊಂಡು, ಐವತ್ತನೇ ಆಕಳಿಕೆವರೆಗೂ ಪ್ರವಾಹ ತಡೆದರೆ ಸಾಕು ಎಂಬ ಅಮೆಂಡ್‌ಮೆಂಟಿಗೆ ಬಂದೆ ಮೂವತ್ತೈದು, ಮೂವತ್ತಾರು. ಮೂವತ್ತೇಳು, ಮೂವತೆಂಟು, ಆಕಳಿಕೆಗಳು ಎಣಿಸಿ ಆಯಿತು. ನಲವತ್ತೆರಡು, ನಲವತ್ಮೂರು ನಲವತ್ನಾಲ್ಕು...ನಲವತ್ನಾಲ್ಕು ಕೂಡಾ ಆಯಿತು. ಇನ್ನ ಆರೇ ಆಕಳಿಕೆ ಗೆಲ್ಲಲು ಒಂದು ರೀತಿ ಹೊಸಹುಮ್ಮಸ್ಸು ತಲೆಯಲ್ಲಿ ತುಂಬಿತು. ಸಲವತ್ತೇಳು ನಲವತ್ತೆಂಟನೇ ಆಕಳಿಕೆ ಎಣಿಸಿದೆ ಇನ್ನ ಎರಡೇ ಎರಡು ಎರಡು ಎರಡೇ ಆಕಳಿಕೆ ಎರಡು ಆಕಳಿಕೆ ಎಣಿಸಿದರೆ ಸಾಕು ಪಾಟನ ಮೇಲೆ ಅಭೂತ ಪೂರ್ವ ವಿಜಯ...

ಯಾರೋ ಬೆನ್ನು ತಟ್ಟಿದ ಹಾಗಾಯಿತು. ಕಣ್ಣುಬಿಟ್ಟೆ ಎದುರ ಪಾಟ ನಿಂತಿದ್ದ ಆತನ ಪಕ್ಕ ಆತನ ಪರಿವಾರ ನನ್ನ ಪಕ್ಕ ನನ್ನಾಕೆ ನನ್ನ ಮುಖಕ್ಕೆ ನೀರರೆಚಿದ್ದರು ಅಂತ ನಂತರ ತಿಳೀತು.

ಆ ಮುದುಕ ನಿಮ್ಮನ್ನ ಮಾತನಾಡಿಸಬೇಕು ಅಂತ ಪಾಪ ತುಂಬ ಇಷ್ಟದಿಂದ ಬಂದನಂತೆ, ಐವತ್ತೊಂಬತರಲ್ಲೋ ಅರವತ್ತರಲ್ಲೋ ಯಾರನ್ನೋ ಹೇಗೆ ಮಾತನಾಡಿಸಿದೆ ಅಂತ ನಿಮಗೆ ಕತೆ ಹೇಳಲು ಆರಂಭಿಸಿದರೆ ಅದೇನೊ ನೀವು ಪಿಟ ಪಿಟ ಪಿಟ ಅಂತ ಅನ್ನಲು ಆರಂಭಿಸಿದರಂತೆ ಆವಾಗಾವಾಗ ಓರೆನೋಟದಲ್ಲಿ ನಿಮ್ಮನ್ನು ನೋಡ್ತಾ ನೋಡ್ತಾ ಕತೆ ಮುಂದುವರೆಸಿದನಂತೆ ಯಾರನ್ನೋ ಮಾತನಾಡಿಸಿದ ವ್ಯಕ್ತಿ ಮೊದಲು ಸಿಕ್ಕಿದ್ದು ರೈಲ್ವೆ ಸ್ಟೇಷನ್‌ನಲ್ಲಂತೆ. ಸ್ಟೇಷನ್‌ನಲ್ಲಿನಿಂದ ಟಿಕೆಟ್ ಕಲೆಕ್ಟರ್‌ನದಾಟಿ ಆಚೆ ಬಂದು ಸೈಕಲ್ ರಿಕ್ಷಾ ಹತ್ತುವ ಪ್ರಸಂಗ ಬರುಅಷ್ಟರಲ್ಲಿ ನೀವು ಬೆವರ್‍ತಾ ಗೋಡೆಗೆ ಒರಗಿದರಂತೆ. ಬಿಸಿಲಿನಲ್ಲಿ ನಿಂತ್ಕೋಬೇಡಿ ಅಂತ ಅದಕ್ಕೆ ಹೇಳೋದು. ಈಗ ವಾಸಿನೇ ಪಾನಕ ಮಾಡಿಕೊಡಲೇ ?......ಅಂತ ಹೆಂಡತಿ ನನ್ನನ್ನು ಒಳಗೆ ಕರೆದು ಕೊಂಡು ಬಂದು ಖುರ್ಚಿ ಮೇಲೆ ಕೂಡಿಸಿ ಫ್ಯಾನ್ ಹಾಕಿ ನಂತರ ಕೇಳಿದಳು.

ಪಾನಕ ಕುಡೀತಾ ಪಕ್ಕದ ಪಾಟನ ವಿರುದ್ಧ ಆಕಳಿಕೆ ಯುದ್ಧದ ವಿಷಯ ತಿಳಿಸಿದೆ. ಹೆಂಡತಿ ಮೊದಲು ದುರ ದುರ ನೋಡಿದವಳು ನಂತರ ಸಣ್ಣಗೆ ನಕ್ಕಳು, ನಲವತ್ತೆಂಟನೇ ಆಕಳಿಕೆ ಕತೆ ಹೇಳುವ ಹೊತ್ತಿಗೆ ಹೊಟ್ಟೆ ಹಿಡಿದುಕೊಂಡಳು "ಐವತ್ತನೇ ಆಕಳಿಕೆ ಕತೆ ಕೇಳಬೇಡ ಅವನೇ ಗೆದ್ದನೋ ನಾನೇ ಗೆದ್ದೆನೋ ಅದು ಒರು ಚಚ್‌ಪೆನ್ನು......"

ಮುದುಕನೇ ಗೆದ್ದಿರೋದು ಬಿಡಿ...ಅಂತ ಮೂತಿ ಅರಳಿಸಿದಳು. ಆಕಳಿಕೆ ಯುದ್ಧದಲ್ಲಿಯೂ ಸೋಲೋ ಕನ್ನಡಿಗ ಅಂದರೆ......!

ಮನಸ್ಸಿನಲ್ಲಿ ಇದ್ರೆ ನಿಜವಾಗ್ಲೂ ಅಕ್ಕರೆ
ಕಾಫಿಲಿ ಕಮ್ಮಿಯಾದ್ರೂ ನಡೆಯುತ್ತೆ ಸಕ್ಕರೆ

–ಎಸ್. ಆರ್. ರಮೇಶ್

"ಷೀನ್ಸ್ ಇಂಟರ್ ನ್ಯಾಷನಲ್"

ಎಂ. ಆರ್. ವಿಶ್ವನಾಥರೆಡ್ಡಿ

"ನಮ್ಮಂತೋರು ಬೆಂಗಳೂರಿನಲ್ಲಿ ತಲೆ ಎತ್ತಿಕೊಂಡು ಮರ್ಯಾದೆಯಿಂದ ಬದುಕ ಬೇಕೆಂದಿದ್ದರೆ ಶೇಕಡಾ 30ರಷ್ಟು ಲೌಕಿಕ ಜ್ಞಾನ ಮತ್ತೆ ಶೇಕಡಾ 70ರಷ್ಟು ಭಂಡ ಧೈರ್ಯ ಇದ್ದರೆ ಸಾಕು" ಎಂದು ಪ್ರಾರಂಭಿಸಿದ ತನ್ನ ಕತೇನ ನಮ್ಮ ಶೀನಿ ಉರುಫ್ ಶ್ರೀನಿವಾಸ ಉರುಫ್ 'ಷೀನ್ಸ್'

ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಟ್ಟು 'ಸರ್ವಿಸ್ ಚಾರ್ಜ್' ತೆಗೆದು ಕೊಳ್ಳುತ್ತಿದ್ದಂತಹವನು ಈಗ "ಷೀನ್ಸ್ ಇಂಟರ್ ನ್ಯಾಷನಲ್ ಕನ್‌ಸಲ್ಟೆಂಟ್"ನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ, ಕಾರಲ್ಲಿ ತಿರುಗಾಡೋ ಹಾಗೆ ಆದದ್ದು ಹೇಗೆ ಎಂಬುದನ್ನು ನನಗೆ ವಿವರಿಸುತ್ತಿದ್ದ ನಮ್ಮ ಶೀನಿ...ಸಾರಿ...ಷೀನ್ಸ್. "ನೋಡೊ ಸೋಮು. ನಾನು 'ಶೀನು ಎಂಟರ್ ಪ್ರೈಸಸ್' ಅಂತ ಬೋರ್ಡು ಹಾಕಿಕೊಂಡು ನಾಲ್ಕೈದು ವರ್ಷಗಳಾದರೂ ನನ್ನ ಸ್ಕೂಟರ್ ಪೆಟ್ರೋಲ್‌ಗೆ ಆಗೋವಷ್ಟು ದುಡಿ ಯೋಕಾಗ್ತಿರಲಿಲ್ಲ. ಆದರೆ ಗುಜರಾತಿನಿಂದ, ದಿಲ್ಲಿಯಿಂದ, ಬೊಂಬಾಯಿನಿಂದ ಬಂದ ಜನ ಬೆಂಗಳೂರಿನಲ್ಲಿ ಲಕ್ಷಾಂತರ ರೂಪಾಯಿ ಕಮಾಯಿಸ್ತಿರೊದೂ ನಮ್ಮ ಚಿಕ್ಕಪೇಟೆ, ಬಳೇಪೇಟೆಯು ಕನ್ನಡದ ಹಳೇ ಅಂಗಡಿಗಳೋರು ತೋಪು ಹಿಡಿದು ಅಂಗಡಿಗಳನ್ನ ಮಾರಿಕೊಳ್ತಿರೋದು ಕಂಡು "ಯಾಕೆ ಹೀಗೆ ? ಇದಕ್ಕೇನು ಕಾರಣ" ಅಂತ ಯೊಚ್ನೆ ಮಾಡ್ತಾ ಮಾಡ್ತಾ ನನಗೆ ಒಂದು ದಿನ ಇದ್ದಕ್ಕಿದ್ದಂತೆ ಬ್ರೇನ್ ವೇವ್ ಬಂದು ಫಳಾ ರನೆ ಮಿಂಚಿತು. ನಮ್ಮ ಜನಕ್ಕೆ ನನ್ನಿಂದ ಸರ್ವೀಸೂ ಆಗ್ಬೇಕು, ಅದರ ಜೊತೇಗೇ ನನ್ನ ಉದ್ಧಾರಾನೂ ಆಗ್ಬೇಕು, ಅದೂ ಸುಲಭದಲ್ಲಿ ಆಗ್ಬೇಕು ಅನ್ನೋದರ ದಾರಿ ಸಿಕ್ಕಿಬಿಡ್ತು" ಎಂದ. "ಅದೇನಪ್ಪಾ! ಅಂಥಾ ಬ್ರೇನ್ ವೇವ್! ಸ್ವಲ್ಪ ವಿವರಿಸುವಂತವ ನಾಗು" ಎಂದೆ ನಾನು. ಶೀನಿ ಸಿಗರೇಟ್ ಹಚ್ಚಿ ಮುಂದುವರಿಸುತ್ತಾ" ಬಾಳಾ ಸಿಂಪಲ್ ಮತ್ತು ಎಫೆಕ್ಟೀವ್‌ಪ್ಲಾನ್ ನಂದು. ಮೊದಲು ನನ್ನ ಆಫೀಸನ್ನ ಮಾಡರ್ನ್ ಮಾಡಿದೆ. 'ಶೀನು ಎಂಟರ್ ಪ್ರೈಸಸ್' ಅಂಬೋ ಬೋರ್ಡನ್ನು ಕಿತ್ತು ಹಾಕಿ ಒಳ್ಳೆ ಆರ್ಟಿಸ್ಟ್ ಕೈಲಿ "ಷೀನ್ಸ್ ಇಂಟರ್ ನ್ಯಾಷನಲ್ ಕನ್‌ಸಲ್ಟೆಂಟ್ಸ್" ಅಂತ ಬೋರ್ಡ್ ಬರೆಸಿ ನೇತು ಹಾಕಿದೆ. ಆ ಮೇಲೆ ನಂಗೆ ಪರಿಚಯು ಇರೋ ಹಳೇ ಅಂಗಡಿಗಳಿಗೆಲ್ಲ ಹೋಗಿ ನನ್ನ ಬಿಸಿನೆಸ್ ಎಕ್ಸ್‌ಪರ್ಟಿಸ್ ಅನ್ನು ಉಪಯೋಗಿಸಿಕೊಳ್ಳಿ ನಿಮ್ಮ ಸಿತಾರಾ ಹೇಗೆ ಆಗುತ್ತೆ ಅಂಬೋದನ್ನ ಆಮೇಲೆ ನೋಡಿ, ಎಂದೆ. ನನ್ನ ಮೊದಲನೇ ಕ್ಲಯಂಟ್ ಚಿಕ್ಕ ಪೇಟೇಲಿ ಇರೋ ದೊಡ್ಡ ಜವಳಿ ಅಂಗಡಿ ಹೊನ್ನಪ್ಪ ಶೆಟ್ಟರು. ಬೆಂಗಳೂರಿಗೆ ವಕ್ರಿಸಿರೋ ಗುಜರಾತಿ, ಮಾರ್ವಾಡಿ, ಯು. ಪಿ. ವಾಲಾಗಳ ಮಧ್ಯೆ ನನ್ನ, ವ್ಯಾಪಾರ

ಡಲ್ ಆಗ್ತಾ ಇದೆ. ಅದೇನ್ಮಾಡ್ತಿಯೋ ಮಾಡಿತೋರಿಸು ಎಂದರು. ನಾನು ಮೊದಲು ಮಾಡಿದ್ದು ಅವರ ಅಂಗಡೀಲಿ ಇದ್ದ ಹಳೇ ಮುದಿ ಸೇಲ್ಸ್‌ಮನ್‌ಗಳನ್ನು ಬದಲಾಯಿಸಿ ಅವರ ಜಾಗಕ್ಕೆ 16ರಿಂದ 20ವರ್ಷದ ಹುಡುಗೀರನ್ನ ಸೇಲ್ಸ್‌ಗರ್ಲ್ಸ್‌ಗಳನ್ನು ಹುಡುಕಿ ತಂದೆ. ಅಂಗಡೀಲಿದ್ದ ಹಳೇ ಜಮಖಾನ. ಲೋಡು. ದಿಂಬಗಳ ಬದಲು ರೋಸ್ ವುಡ್ ಫರ್ನೀಚರ್ ತರಿಸಿಹಾಕಿಸಿದೆ ಒಳ್ಳೆ ಷೋಕೇಸ್ ಮಾಡಿಸಿಕೊಟ್ಟೆ. ಆದರೆ ನನ್ನ ಟ್ರಂಪ್ ಕಾರ್ಡ್ ಎಂದರೆ ಅಂಗಡಿ ಮುಂದೆ ರಾರಾಜಿಸುವ ಬೋರ್ಡ್. ಬೆಂಗಳೂರಿನಲ್ಲಿ ಕನ್ನಡ ಯಾರಿಗೆ ಬೇಕು ? ಎಷ್ಟು ಜನಕ್ಕೆ ತಿಳಿಯುತ್ತೆ ? ಸುದ್ದುಗುಂಟೇ ಪಾಳ್ಯದಲ್ಲೂ ಇಂಗ್ಲಿಷ್ ಶಾಲೆ ಇರೋವಾಗ ಚಿಕ್ಕಪೇಟೇಲಿ ಕನ್ನಡ ಇರುತ್ತೆ ? ಆದ್ದರಿಂದ ನಾನು 'ಹೊನ್ನಪ್ಪ ಶೆಟ್ಟಿ ಮತ್ತು ಮಗ, ಜವಳಿವ್ಯಾಪಾರಿಗಳು' ಅಂಬೋ ಬೋರ್ಡನ್ನ 'ಹೊನ್‌ಸನ್ ಸಿಲ್ಕ್ಸ್' ಅಂತಾ ನಿಯಾನ್ ಲೈಟ್‌ನಲ್ಲಿ ಬರೆಸಿ ಹಾಕಿಸಿದೆ. ಕೇವಲ ಆರು ತಿಂಗಳಲೇ ಅವರ ಅಂಗಡಿ ವ್ಯಾಪಾರ ಆರರಷ್ಟು ಜಾಸ್ತಿ ಆಗಿದೆಯಂತೆ. ಕಳೆದವಾರ ಜುಹಿ ಚಾವ್ಲ ಅವರ ಅಂಗಡಿಗೆ ಬಂದು ಬಟ್ಟೆ ಖರೀದಿಸಿದಳಂತೆ" ಎಂದ ಬೀಗುತ್ತಾ, "ವೆಲ್‌ಡನ್ ವೆಲ್‌ಡನ್" ಅಂತಾ ನಾನು ಇಂಗ್ಲೀಷಿನಲ್ಲೇ ಸಂತೋಷ ವ್ಯಕ್ತಪಡಿಸಿದೆ.

"ಇದು ಪ್ರಾರಂಭದ ಕತೆ. ಮುಂದೇನಾಯ್ತು ಅಂತ ಕೇಳು" ಎಂದು ಷೀನ್ಸ್ ಮುಂದುವರೆಸಿದ "ನನ್ನ ಎರಡನೇ ಕ್ಲಯಂಟ್ ಯಾರು ಗೊತ್ತೆ ? ಅವೆನ್ಯೂ ರಸ್ತೆಯ ದೊಡ್ಡ ಚಿನ್ನಬೆಳ್ಳಿ ಅಂಗಡಿಯ ಪತ್ತಿಕೊಂಡ ಆದಿನಾರಾಯಣ ಶೆಟ್ಟಿ. ಅವರ ಅಂಗಡಿನ ದೆಹಲಿಯ ಕನಾಟಪ್ಲೇಸಿನ ಜ್ಯೂವೆಲರ್ಸ್ ಅಂಗಡೀ ತರಾ ಫಳ ಫಳ, ಥಳ ಥಳ ಅನ್ನೋಹಂಗೆ ಬದಲಾಯಿಸಿಕೊಟ್ಟೆ, ಮುಖ್ಯವಾಗಿ ಬೋರ್ಡ್ ತಾನೇ ಬೇಕಾಗಿರೋದು. ಹಳೇ ಬೊರ್ಡ್ ತೆಗಸಿ ಆಜಾಗದಲ್ಲಿ "ಕಾಟನ್ ಹಿಲ್ ಜ್ಯುವೆಲರ್ಸ್" ಅಂತಾ ಸ್ಟೈಲಾಗಿ ಬರೆಸಿದೆ. ಮೊನ್ನೆ ಐಶ್ವರ್ಯ ರೈ ಬಂದಿದ್ದಳಂತೆ ಅವರ ಅಂಗಡೀಗೆ ಈಗ ಅದು ಬೆಂಗಳೂರಿಗೇ ಹೆಸರು ತಂದಿರೋ ಅಂಗಡಿ"

ನಾನು ನನ್ನ ಆಶ್ಚರ್ಯವನ್ನು ''WOW'' ! ಎಂದು ವ್ಯಕ್ತಪಡಿಸಿದ ಇಂಗ್ಲೀಷಿನಲ್ಲಿ.

"ಈಗಾಗಲೇ ಒಂದು ನೂರು ಐವತ್ತು ಅಂಗಡಿಗಳಾಗಿ ನನ್ನ ಸೇವೇಯ ಲಾಭ ಆಗಿದೆ ನೆನ್ನೇ ತಾನೆ ನಾನು ಸಿಟಿ ಮಾರ್ಕೆಟನಲ್ಲಿದ್ದ ಹಳೇ ಗ್ರಂಥಿಗೆ ಅಂಗಡೀಗೆ ಹೊಸ ಲೈಫ್ ಕೊಟ್ಟು ಬಂದಿದ್ದಾನೆ ಅಲ್ಲಿದ್ದ ಜಿಡ್ಡುಗಟ್ಟಿದ್ದ ಹಳೇ ಡಬ್ಬಾಗಳನ್ನೆಲ್ಲ ತೆಗೆಸಿ

ಬ್ರೈಟ್ ಪ್ಲಾಸ್ಟಿಕ್ ಬಾಕ್ಸ್‌ಗಳನ್ನು ತರಿಸಿ ಹೇಗೆ ಜೋಡಿಸಬೇಕೆಂಬೋದನ್ನೂ ತೋರಿಸಿ ಬಂದಿದ್ದೇನೆ. ಅವರ "ಮುನಿಸ್ವಾಮಪ್ಪ ಗ್ರಂಥಿಗೆ ಅಂಗಡಿ" ಅಂಬೊ ಹೆಸರನ್ನು ತೆಗೆಸಿ "ಹಿಮಾಲಯನ್ ಹರ್ಬ್ಸ್ ಅಂತಾ ಬದಲಾಯಿಸಿಕೊಟ್ಟಿದ್ದೇನೆ" ಎಂದು ಹೇಳಿ ಹುಬ್ಬು ಹಾರಿಸಿದ ಷೀನ್ಸ್.

"ಭಾರೀ ಆಸಾಮಿಗಳೇ ನಿನ್ನ ಕ್ಲಯಂಟ್ಸ್. ಅಂದ ಮೇಲೆ ನೀನು ಸಾಕಷ್ಟು ಕಮಾಯಿಸಿರಬೇಕಲ್ವೇ" ಎಂದೆ ನಾನು. ಅದಕ್ಕೆ ಷೀನ್ಸ್ "ಬಿಗ್ ಬಿಸಿನೆಸ್ ಬಗ್ಗೆ ನಾನು ತೋರಿಸೋ ಆಸಕ್ತೀನ ಸ್ಮಾಲ್ ಬಿಸಿನೆಸ್‌ಲ್ಲಿ ತೋರಿಸ್ತೀನಿ ಮಲ್ಲೇಶ್ವರದಲ್ಲಿ ನಾರಾಣಪ್ಪನ ಒಂದು ತಗಡಿನ ಹೋಟೆಲ್ ಇತ್ತು ನೋಡು, ಒಂದು ಮೂಲೇಲಿ, ನಾವಿಬ್ರೂ ಅಲ್ಲಿ ಒನ್-ಬೈ-ಟೂ ಕಾಫಿ ಕುಡೀತಿದ್ವಲ್ಲಾ, ಆ ಹೋಟೆಲ್‌ಗೆ ಬಣ್ಣದ ಪ್ಲಾಸ್ಟಿಕ್ ತಗಡು ಹೊಡೆಸಿ ಪ್ಲಾಸ್ಟಿಕ್ ಹಾಳೇಲಿ ದೋಸೇನ ಮಣ್ಣಿನ ಕುಡಿಕೇಲಿ ಕಾಫೀನ ಸರ್ವ್ ಮಾಡಿಸೋ ಹಾಗೆ ಸಲಹೆಕೊಟ್ಟು ಬಂದೆ. ಈಗ ಬೋರ್ಡ್ ಮುಖ್ಯ ಅಂತ ಹೇಳಿದ್ದೇನೆ ತಾನೆ. 'ಉಡುಪಿ ಶ್ರೀಕೃಷ್ಣ ಕೆಫೆ' ಅಂಬೋ ಜಾಗದಲ್ಲಿ "ಹೊಟೇಲ್ ಮುಂದೆ ಯಾವಾಗಲೂ ಗುಂಪು ಕಟ್ಟಿಕೊಂಡಿರ್ತಾರೆ ಮಣ್ಣಿನ ಕುಡಿಕೆ ಕಾಫೀ ಕುಡಿಯೋಕೆ. ಈಗ ಆ ನಾರಾಯಣಪ್ಪ ರಾಜಭವನದ ಆಫಿಷಿಯಲ್ ಕೇಟರರ್ ! ಅದೇ ರೀತೀಲಿ ನಾನು ಚಾಮರಾಜ ಪೇಟೇಲಿ ಕ್ಷೌರ ಮಾಡಿಸಿಕೊಳ್ಳೋ ತಿಮ್ಮಪ್ಪನ ಅಂಗಡೀನೂ ಟ್ರಾನ್ಸ್ ಫಾರ್ಮ್ ಮಾಡಿ ಬಿಟ್ಟಿದ್ದೇನೆ ಮೊದಲು ತಿಮ್ಮಪ್ಪನಿಗೆ ಬಿಳೀ ಪ್ಯಾಂಟ್ ಹಾಕ್ಸಿ ಮೇಲೆ ಡಾಕ್ಟರ್‌ಗಳು ಹಾಕ್ಕೊಳ್ಳೋ ಅಂತಾ ಬಿಳೀ ಏಪ್ರನ್ ತೊಡೆಸಿದೆ, ಅಂಗಡೀನ ಏರ್ ಕಂಡೀಷನ್ ಮಾಡ್ಸಿ 'ಆಯುಷ್ಕರ್ಮ ಶಾಲಾ ಪ್ರೊ, ತಿಮ್ಮಪ್ಪ' ಅಂಬೋ ಬೋರ್ಡನ್ನ ತೆಗೆಸಿ 'ಟಿಮ್ಮೀಸ್ ಹೇರ್ ಕ್ಲಿನಿಕ್' ಅಂತಾ ಬರೆಸಿ ಹಾಕಿಸಿದೆ. ಈಗ ಅವನಂಗಡೀಲಿ ಚೌರ ಮಾಡಿಸಿಕೊಳ್ಳೋಕೆ ಹೋಗೋರು ಟೋಕನ್ ತಗೊಂಡು ಕ್ಯೂನಲ್ಲಿ ಕಾಯ್ಬೇಕು. ಅಂದ ಹಾಗೆ ಇತ್ತೀಚೆಗೆ ಬೊಂಬಾಯಿನಿಂದ ಷಾರುಕ್‌ಖಾನ್ ಬಂದಿದ್ನಂತೆ ಹೇರ್ ಕಟ್‌ಗೆ" ಎಂದು ಹೇಳಿದಾಗ ನಾನು"ಸ್ಪ್ಲೆಂಡಿಡ್! ಸ್ಪ್ಲೆಂಡಿಡ್"! ಎಂದು ಹೇಳಿ ಕರತಾಡನ ಮಾಡಿದೆ. ಅಷ್ಟರಲ್ಲಿ ಪಂಚೆಉಟ್ಟು ಮೇಲೆ ಕರೀಕೋಟು. ಕೊಲ್ಹಾಪುರಿ ರುಮಾಲು ಸುತ್ತಿದ್ದ ಒಬ್ಬ ವ್ಯಕ್ತಿ ಒಳಗೆ ಬಂದು ಷೀನ್ಸ್‌ಗೆ ನಮಸ್ಕರಿಸುತ್ತಾ "ಶರಣ್ರೀ ಸಾಹೇಬ್ರೆ ನಾನು ಹುಬ್ಬಿಯವಾರೀ ನಿಮ್ಮ ಸಲಹಾ ಪಡೀಲಿಕ್ಕೆ ಬಂದೀನ್ರೀ" ಎಂದ ಬಂದವರನ್ನು "ಪ್ಲೀಸ್‌. ಟೇಕ್ ಎ ಸೀಟ್" ಎಂದು ಹೇಳಿ "ಯಸ್, ವಾಟ್ ಕೆನ್ ಐ ಡು ಫಾರ್ ಯು" ಎಂದ ಷೀನ್ಸ್.

ಬಂದವ "ನೋಡ್ರೀ ಸಾಹೇಬ್ರ, ನನ್ನ ಹೆಸರು ಬಸಪ್ಪ ಮಲ್ಲಪ್ಪ ಅಂತಾರಿ, ನಂದು ಹುಬ್ಳೀಲಿ ಸುಗಂಧದ್ರವ್ಯಗಳ ಅಂಗಡಿ ಐತ್ರಿ, ಬೆಂಗಳೂರಿನಾಗೂ ಒಂದು

ಶಾಪ್ ಅಂಗಡಿ ತಗಿಯೋಣ ಅಂಬೋ ವಿಚಾರನಂದು, ಬೆಂಗಳೂರಿನಲ್ಲಿ ಅಗದೀ ಭಯಂಕರ ವ್ಯಾಪಾರ ಆಗೋ ಹಂಗೆ ನಮಗೆ ನೀವು ಸಲಹಾ ಕೊಡ್ಬೇಕ್ರಿ" ಎಂದ ವಿನಯದಿಂದ.

ಅಂಗಡಿ ಎಲ್ಲಿರ್ಬೇಕು, ಹೇಗಿರರ್ಬೇಕು ಅನ್ನೋ ವಿಚಾರ ಆಮೇಲೆ ಡಿಸ್‌ಕಸ್ ಮಾಡೋಣ ಮೊದ್ಲು ನಿಮ್ಮ ಅಂಗಡಿ ಬೋರ್ಡ್ ಯಾವ ರೀತಿ ಇರಬೇಕು ಅಂಬೋದು ನಿರ್ಧಾರ ಆಗಲಿ. ಹುಬ್ಳೀಲಿ ನಿಮ್ಮ ಅಂಗಡಿ ಹೆಸರೇನು ?" ಎಂದು ಕೇಳಿದ ಪೀನ್ಸ್ "ನಂದು 'ಬಸಪ್ಪ ಮಲ್ಲಪ್ಪ ಸುಗಂಧದ್ರವ್ಯಗಳು' ಅಂಬೋ ಹೆಸರೈತ್ರಿ" ಎಂದು ಬಂದವ ಹೇಳುತ್ತಿದ್ದಂತೆ ಪೀನ್ಸ್ ನೋ ! ನೋ ! ನೋ ! ಬೆಂಗಳೂರಿನಲ್ಲಿ ಅಂತಾ ಹೆಸರುಗಳೆಲ್ಲ ನಡೆಯೊಲ್ಲ, ನಿಮ್ಮ ಅಂಗಡೀಗೆ ಒಳ್ಳೆ ಹೆಸರನ್ನ ಸೂಚಿಸ್ತೇನೆ" ಎಂದು ಹೇಳಿ ತನಗೆ ತಾನೇ ಹೇಳಿಕೊಳ್ಳತೊಡಗಿದ–ಬಸಪ್ಪ ಅಂದ್ರೆ ಬುಲ್ ಮಲ್ಲಪ್ಪ ಅಂದ್ರೆ? ಮಲ್ಲಪ್ಪ......ಮಲ್ಲಪ್ಪ ? ಹಾ ಸಿಗ್ತು ಮಲ+ಅಪ್ಪ=ಮಲ್ಲಪ್ಪ ಮಲ ಅಂದ್ರೆ ಪಿಟ್, ಅಪ್ಪ ಅಂದ್ರೆ ಫಾದರ್ ಹಾ. ಸಿಕ್ಕೇಬಿಡ್ತು ನೋಡ್ರಿ, ಇಟ್ರೆ ನಿಮ್ಮ ಅಂಗಡೀ ಹೆಸರು ಬುಲ್ ಪಿಟ್ ಸೆಂಟ್ಸ್ ಅಂಡ್ ಕಾಸ್ಮೆಟಿಕ್ಸ್ ಅಂತ ಇರ್ಲಿ" ಎಂದು ಹೇಳುತ್ತಿದ್ದಂತೆ ನಾನು ಅಲ್ಲಿಂದ ಜಾಗ ಖಾಲಿ ಮಾಡಿದೆ.

ಅಮ್ಮನ್ ಮಾತೊಂದ್ರೆ ಯಾವಾಗ್ಲೂ
ಅಪ್ಪಂಗೆ ಸಿಡಿ ಮಿಡಿ ಆದ್ರೆ
ಕಾಣ್ದೇ ಹೋದ್ರೆ ಒಂದ್ನಿಮಿಷ ಅಮ್ಮ
ನೋಡ್ಬೇಕು - ಅಪ್ಪ ಬೆಂಕಿ ಕಿಡಿ

ಎಸ್. ಆರ್. ರಮೇಶ್

ಕರೆಂಟು ಹೋದಾಗ

ನಾಗೂಶ್ರೀ ಸೂರಿ

ಸೀತಾರಾಮೂ ಮನೇಲಿ ಇಂಥಾದ್ದು ಎಲಕ್ಟ್ರಿಕ್ ಸಾಮಾನು ಇಲ್ಲ ಅಂತಿಲ್ಲ-ಫ್ರಿಜ್ಜು, ರೂಮ್ ಕೂಲರ್, ಮೈಕ್ರೋವೇವ್... ಯಾವುದು ಬೇಕು ? ಈವತ್ತು ಪೇಪರ್ ನಲ್ಲಿ ಬಂತೂ ಅಂದ್ರೆ ನಾಳೆ ಅವನ ಮನೇಲಿ ಇರುತ್ತೆ. ಹೆಂಡತೀನ ಮೆಚ್ಚಿಸೋಕ್ಕೆ ಅವನು ಮಾಡದೇ ಇರೋದು ಒಂದಿಲ್ಲ.

ಆದರೆ ಏನು ಪ್ರಯೋಜನ ? ಒಂದು ಓಡತಾ ಇದ್ದಾಗ ಇನ್ನೊಂದನ್ನ ಆನ್ ಮಾಡಿದ್ರೆ ಫ್ಯೂಸ್ ಢಮಾರ್ ಅನ್ನತ್ತೆ. ಅದೂ ಎಲ್ಲಿ ? ಮೀಟರ್ 'ಬೋರ್ಡ್'ನಲ್ಲಿ ಅಲ್ಲ. ಎದುರಿಗಿರೋ ಕಂಭದಲ್ಲೇನೆ. ಆವಾಗ ಏನು ಮಾಡಬೇಕು ? ಮುಂದಿನ ಬೀದೀಲಿ ಇರೋ ಲೈಟ್ ಆಫೀಸಿಗೆ ಹೋಗ ಬೇಕು, ಅಲ್ಲಿರೋ ಲೈನ್‌ಮ್ಯಾನ್‌ಗಳಿಗೆ ಮಸ್ಕಾ ಹೊಡೀಬೇಕು ಕೊಂಚ ಬಂದು ನೋಡೀ ಅಪ್ಪ. ಅಂತ.

ಆಯಿತು, ಅವರು ಬರತಾರೆ, ಫ್ಯೂಸ್ ಹಾಕಿ ಹೋಗುತಾರೆ. ಆದರೆ ಅದೆಷ್ಟು ಹೊತ್ತು ಇರತ್ತೆ ? ಏನಾದರೂ ಏಮಾರಿದ್ರೆ ನಾಕು. ಮತ್ತೆ ಅದೇ ರಾಮಾಯಣ. ಸೀತಾರಾಮೂಗೆ ಸಾಕಪ್ಪಾ ಸಾಕೂ ಅನ್ನಿಸಿ ಬಿಡತ್ತೆ.

ಅವನೂ ಫ್ಯಾಕ್ಟರೀನಲ್ಲಿ ಇಂಜಿನಿಯರ್ ಕೆಲಸ ಮಾಡತಾ ಇರೋನೆ. ಹಾಗಾಗಿ ಅವನಿಗೂ ಈ ಕರೆಂಟು, ಫ್ಯೂಸು ಅನ್ನೋದರ ಬಗ್ಗೆ ಅಷ್ಟೊ ಇಷ್ಟೊ ಗೊತ್ತು. ಅವ ನಿಗೆ ಒಂದೇ ಗುಮಾನಿ–ಇವರುಗಳು ಬಂದು ಹಾಕಿ ಕೊಟ್ಟು ಹೋಗತಾರಲ್ಲ, ಆ ಫ್ಯೂಸುಗಳು under rated ಆಗಿರ ಬಹುದು ಅಲ್ಲವೇ ? ಇಲ್ಲದೆ ಹೋದ್ರೆ... ಕಂಭದಲ್ಲಿ ಹೋಗೋಣ ಅಂದ್ರೇನು ?

ಒಂದೆರಡು ಸಲ ಅವನು ಕೇಳಿ ಕೂಡ ಕೇಳಿದ್ದ-"ಅಲ್ಲ, ಯಜಮಾನ್ರೆ, ಈ ತೊಂದರೆಯೆಲ್ಲ ಈಗ ಒಂದು ಆರು ತಿಂಗಳು ಓಂದಿನಿಂದ ಅಷ್ಟೆ. ಅದಕ್ಕೆ ಮುಂಚೆ ಎಲ್ಲಾ ಸರಿಯಾಗೇ ಇತ್ತಲ್ಲ ?..."

"ಹೌದು ಸಾರ್, ಅವಾಗ ನಂಜಪ್ಪನವರು ನಿಲ್ಲಿ A. E. E. ಆಗಿದ್ರು, ಅವರಿಗೂ ನಿಮಗೂ ಬಹಳಾ ಬಹಳಾನೇ ಅಂತೆ, ಹಾಗಾಗಿ ನಿಮ್ಮನೇಗೆ ಅಂದ್ರೆ ಅವರಷ್ಟೇ ವಪ್ಪದ್ದು ಫ್ಯೂಸು ಹಾಕಿಸಿ ಕೊಡತಾ ಇದ್ರು... ಅಲ್ಲಿ ಶರಾವತೀಲೇ trip ಆದ್ರೂ ಸರಿ, ನಿಮ್ಮನೇ ಫ್ಯೂಸ್ ಮಾತ್ರ ಹೋಗತಾ ಇರಲಿಲ್ಲ. ಈವಾಗಲೂ ಏನಾಯಿತು. ಅವರನ್ನೆ ಕರೆಸಿ ಕೊಂಡರೆ ಆಯಿತು..."

ಆವಾಗಲೇ ಅವನಿಗೆ ಕಿರಿಕ್ಕು ಎಲ್ಲಿ ಅಂತ ಗೊತ್ತಾಗಿದ್ದು, ನಂಜಪ್ಪನವರು ಅವನಿಗೆ family friend ಆ ಸಂಬಂಧಾನ ಬಳಸಿಕೊಂಡು ಅವನು ಎಲ್ಲಿರ ಮೇಲೂ ರೋಫು ಹಾಕಿಕೊಂಡು ಕೆಲಸ ಮಾಡಿಸಿ ಕೊಳ್ಳುತ್ತಾ ಇದ್ದ. ಮೂರು ಕಾಸು ಕಾಫೀ ಖರ್ಚಿಗೆ ಅಂತ ಕೊಡದೀರ, ಸಾಲದ್ದಕ್ಕೆ ಏನಾದರೂ ಸ್ವಲ್ಪ ಹೆಚ್ಚು ಕಡಿಮೆ ಆಯಿತೂ ಅಂದ್ರೆ ಆಗಲೇ ನಂಜಪ್ಪನವರಿಗೆ ಫೋನು ಮಾಡಿ ಎಲ್ಲರಿಗೂ ಜಾನ್ ನಿಕಾಲ್ ಮಾಡಿಸತಾ ಇದ್ದ. ಮಗನೇ, ಇರಲಿ ಎಷ್ಟು ದಿನಾ ಅಂತ ಹೀಗೇ ನಡಸ್ತಿ, ನಾವೂ ನೋಡೇ ಬಿಡತೀವಿ, ಅಂದು ಕೊಂಡು ಅವರೂ ಸಮಯ ಕಾಯುತಾ ಇದ್ರು ಅನಿಸತ್ತೆ.

ಆರು ತಿಂಗಳ ಕೆಳಗೆ, ಅದ್ಯಾರ ಹತ್ರನೋ ದುಡ್ಡು ತಿಂದ್ರೂ ಅಂತ ಲೋಕಾಯುಕ್ತರ ಕೈಗೆ ಸಿಕ್ಕಿ ಕೊಂಡು ಅಮಾನತ್ತು ಆಗ ಹೋಯ್ತು, ಆ ನಂಜಪ್ಪನವರಿಗೆ, ಅವಾಗಿಂದ ನೋಡೀಪ್ಪಾ, ಈ ಸೀತಾರಾಮೂಗೆ ಸಾಡೇ ಸಾತಿ, ಏನಾದ್ರೂ ಕೆಲಸ ಅಂತ ಹೋದ್ರೆ, ಬರೋಲ್ಲ ಅನ್ನೊಲ್ಲ... ಬರತಾರೆ, ಚಕ ಚಕ ಅಂತ ಕೆಲಸಾನೂ ಮಾಡಿ ಹೋಗತಾರೆ, ಆದ್ರೆ ಆವಾಗಲೂ ಮೊದಲಿನ ಥನಾನೆ, ಮತ್ತೆ ಯಾವಾಗ ಫ್ಯೂಸ್ ಎಗರಿ ಬೀಳತ್ತೋ ದೇವರೇ ಬಲ್ಲ.

ಒಂದು ಹತ್ತೋ ಇಪ್ಪತ್ತೋ ಕೈ ಬೆಚ್ಚಗೆ ಮಾಡೊಕ್ಕೆ ಕೊಟ್ರೆ ಸರಿ ಹೋಗತ್ತೇನೋ ಅಂದು ಕೊಂಡ್ರೆ, ಉಹುಂ ಇಲ್ಲ. ಬೇರೆ ಕಡೆ ಅದು ಬೇಕಾದಷ್ಟು ನಡಸಬಹುದು, ಆದರೆ ಇಲ್ಲಿ...?

"ಅಯ್ಯೋ ಬೇಡಿ ಸ್ವಾಮಿ... ದೇವರಂಥಾ ಮಹಾನುಭಾವ ನಂಜಪ್ಪನವರು ಅವರ ಸ್ನೇಹಿತರು ನೀವು, ನಿಮ್ಮ ಹತ್ರ ಕಾಸು ತಗೊಂಡರೆ ಆ ಶಿವ ಮೆಚ್ತಾನಾ?... ನಮಗೆ ಕಾಸು ಮುಖ್ಯಾ ಅಲ್ಲ ಜನಗಳ ವಿಶ್ವಾಸ ಮುಖ್ಯ... ನೀವು ಕಾಲಲ್ಲಿ ತೋರಿಸಿ, ನಾವು ಕೈಯಲ್ಲಿ ಮಾಡಿ ಮುಗಿಸತೀವಿ."

ಎಲ್ಲಾ ಬೂಟಾಟಿಕೆ ದಾಸಯ್ಯಗಳೇ, ಜಿದ್ದು ಬಿಡತಾ ಇಲ್ಲ !

ಹೋದವಾರ ಅವರ ಚಿಕ್ಕ ತಾತ ವೆಂಕಟರಾಮಯ್ಯನವರು, ಬೆಂಗಳೂರ್ನಲ್ಲಿ ಏನೋ ಕೆಲಸ ಇದೆ, ಒಂದು ನಾಕು ದಿನ ನಿಮ್ಮನೇಲಿ ಇದ್ದು ಹೋಗತೀನಿ ಅಂತ ಹಳ್ಳಿಯಿಂದ ಬಂದರು. ಇಷ್ಟು ದಿನಾ ಆದ ಮೇಲೆ ನಮ್ಮ ಮನೇಗೆ ಬರತಾ ಇದಾರೆ ಅಂತ ಸಂತೋಷ ಆದ್ರೂನೂವೆ ಅವನಿಗೆ ಒಂದು ಥರಾ ಭಯ, ವೆಂಕಟರಾಮಯ್ಯನವರಿಗೆ ಹಳ್ಳೀ ಅಭ್ಯಾಸ, ಸ್ನಾನ ಅಂದ್ರೆ ಎರಡು ಹಂಡೆ. ಅವರು ಇಲ್ಲಿ ಇರೋವಾಗ ಆ ಬಾಯಿಲರ್ ಏನಾದ್ರೂ ಕೈ ಕೊಟ್ಟರೆ ಏನುಗತಿ ?... ನಾಕು ದಿನ ಊಟ ಹಾಕೋಕೆ ಕಂಜೂಸಿ ಮಾಡಿಕೊಂಡು, ತಣ್ಣೀರು ಸ್ನಾನ ಹಾಕಿ ಓಡಿಸಿದ ಅಂತ ನಾಳೆ ದಿನ ಹಳ್ಳೀ ಲೆಲ್ಲ ಟಾಂ ಟಾಂ ಆಗಿ ಹೋಗುತ್ತೆ, ಅಲ್ಲವೇ ?

ಅವನು ಅಂದು ಕೊಳ್ಳೋಕ್ಕೂ ಅದು ಹಾಗೇ ಆಗೋದಕ್ಕೂ ಸರೀ ಹೋಯಿತು. ಅವತ್ತು ಭಾನುವಾರ ಮೈಗೆಲ್ಲ ಎಣ್ಣೆ ಹಚ್ಚಿ ಕೊಂಡು ಅವರು ಕೂತಿದ್ದಾರೆ. ಆವಾಗಲೇನೆ ಫ್ಯೂಸ್ ಢಂ ಅನ್ನ ಬೇಕಾ ? ಈಗ ಏನು ಮಾಡೋದು ? ನೀರು ಬಿಸಿ ಇಲ್ಲ ಅಂದ್ರೆ ಜಿಡ್ಡು ಹೋಗಲ್ಲ-ಬ್ಲಾಟಿಂಗ್ ಪೇಪರ್ ತಗೊಂಡು ಎಣ್ಣೆ ಒರಸತೀನಿ ಅಂದ್ರೆ... ವೆಂಕಟರಾಮಯ್ಯ ಕೇಳ ಬೇಕಲ್ಲ ?

ಸರಿ, ಹಳೆ ಗಂಡನ ಪಾದವೆ ಶರಣು ಅಂತ ಅಂದು ಕೊಂಡು ಒಂದು ಶರಟು ತಗಲಿಸಿ ಕೊಂಡು ಹೊರಟ, ಲೈಟ್ ಆಫೀಸ್ ಕಡೆಗೆ.

"ಅಯ್ಯೋ ಅದೆಲ್ಲ ಯಾಕ ತೊಂದರೆ, ಸೀತಾ ರಾಮೂ ?... ಅದನ್ನ ನಾನು ಸರೀ ಮಾಡತೀನಿ. ...ಮನೇಲಿ ಒಂದು ಸರ್ವೆ ಕಟ್ಟಿಗೆ ಇದೆಯೇನಮ್ಮ ಗೋದಾವರೀ...?"

"ಎಲ್ಲಿ ಬಂತೂ ತಾತ ? ಮನೇಲಿ ನೀರೊಲೆ ಇದ್ರೆ ತಾನೆ...?"

"ಆಯಿತು, ಬೇರೆ ಏನಾದ್ರೂ ಮರದ ತುಂಡೂ? ...ಕ್ರಿಕೆಟ್ ಬ್ಯಾಟೂ, ವಾಕಿಂಗ್ ಸ್ಟಿಕ್ಕೂ. ಅಂತ, ...ನಾಲಕ್ಕು ಏಟು ಹಾಕಿದ್ರೆ ಮುರೀದೇ ಇರೋದು?."

ಏನೂ ? ಸ್ನಾನ ಆಗೊಲ್ಲ ಅಂತ ಕೋಪಕ್ಕೆ ಯಾರದಾದರೂ ಕಾಲು ಮುರೀ ಬೇಕು ಅಂತ ಅಂದು ಕೊಂಡಿದ್ದಾರಾ ಇವರೂ ? ಅಂತ ಅನ್ನಿಸಿದ್ರೂ ಕೊಡದೇ

ಇದ್ರೆ ಇನ್ನು ಏನು ಮಾಡತಾರೋ ಅಂದು ಕೊಂಡು ಮನೆಯೆಲ್ಲಿ ಹುಡುಕಿದ ಮೇಲೆ ಸಿಕ್ಕಿತು. ಒಂದು ಹಳೇ ಕುರ್ಚಿ ಕಾಲು, ಕರೀ ಮರದ್ದು.

"ಆಯಿತು, ಅದೇ ಸಾಕು...ಕೊಡೂ" –ಅಂತ ಇಸಕೊಂಡೋರು ಏನು ಮಾಡತಾ ಇದ್ದಾರೆ ?

ಹೋಗಿ ಮನೇ ಮುಂದೆ ಇದ್ದ ಕಂಭಕ್ಕೆ ರಪ ರಪ ಚಚ್ಚತಾ ಇದಾರೆ !

ಸೀತಾರಾಮೂಗೆ ಆವಾಗ ಜ್ಞಾಪಕ ಬಂತು. ಅವನು ಚಿಕ್ಕವನಾಗಿದ್ದಾಗ-ಅಂದ್ರೆ ನಲವತ್ತೈದನೆ ಇಸವಿ ಸುಮಾರಿನಲ್ಲಿ-ಜನ ಹೀಗೇ ಮಾಡತಾ ಇದ್ರು. ಯಾವಾಗಲಾದರೂ ಕರೆಂಟು ಹೋದರೆ ಒಂದು ಸರ್ವೆ ಕಟ್ಟಿಗೆ ತುಂಡು ತಗೊಂಡು ದೀಪದ ಕಂಭಕ್ಕೆ ದಬ ದಬ ಬಡಿಯೋರು. ಯಾಕೆ ಹಾಗೆ ಮಾಡ ಬೇಕು, ಹಾಗೆ ಮಾಡಿದ್ರೆ ಏನಾಗುತ್ತೆ ಅಂತ ಒಬ್ಬರಿಗೂ ಗೊತ್ತಿಲ್ಲ. ಆದರೆ ಒಂದೊಂದು ಸಲ ಎಲ್ಲಾದರೂ loose contact ಇತ್ತೂ ಅಂದಿದ್ರೆ ಅಡ್ಡೇಟ್ ಮೇಲೆ ಗುಡ್ಡೇಟ್ ಅಂತ ಅದು ಸರಿ ಹೋಗಿ ಬಿಡೋದು,–ಈಗ ತಾತಾನೂ ಹಾಗೆ ಮಾಡತಾ ಇದಾರೆ.

ಒಂದು ಹತ್ತು, ಹೊಡೆತ ಹೊಡೆಯೋ ಹೊತ್ತಿಗೆ ಕಟ್ಟಿಗೆ ಮುರೀತೇ ಹೊರತು ಬೇರೆ ಏನೂ ಆಗಲಿಲ್ಲ.

"ಹುಂ ಯಾಕೋ ಸರಿ ಹೋಗ್ತಿಲ್ಲ ಸೀತಾರಾಮೂ–ನೀನು ಲೈಟ್ ಆಫೀಸಿಗೆ ಹೋಗಿ ಬರೋದೇ ವಾಸಿ ಅನ್ನಿಸತ್ತೆ. ಪರಂಗೀಯವರ ಕಾಲದಲ್ಲಿ ಹೀಗಿರಲಿಲ್ಲ-ಒಂದು ನಾಕು ಏಟು ಹಾಕೋ ಹೊತ್ತಿಗೆ ಎಲ್ಲ ಸರಿ ಹೋಗಿ ಬಿಟ್ಟಿರೋದು... ಅದೂ ಅಲ್ಲದೆ ಈ ಕರೀ ಮರದಲ್ಲಿ ಕೆಲಸ ಆಗೊಲ್ಲ. ಅದಕ್ಕೆಲ್ಲ ಸರ್ವೆ ಕಟ್ಟಿಗೇನೇ ಬೇಕು..."

"ಅಯ್ಯೋ, ಈ ಕಟ್ಟಿಗೇಲೂ ಆಗಿರೋದು ತಾತ... ಆದ್ರೆ ನೀವು ಹೊಡೀ ಬೇಕಾದ ಕಡೆ ಹೊಡೀಲಿಲ್ಲ–ಅದೇ ನೀವು ಮಾಡಿದ ತಪ್ಪು"

"ನಾನು ಮಾಡಿದ್ದು ತಪ್ಪು ಅಂತಿಯೇನೋ ಮುಠ್ಠಾಳಾ–ಅದಕ್ಕೇ ಹೇಳೋದು, ಅಲ್ಪ ವಿದ್ಯಾ ಮಹಾಗರ್ವಿ ಅಂತ–ಆಯಿತು, ಹೇಳು, ಎಲ್ಲಿ ಹೊಡದಿದ್ರೆ ಸರೀ ಬರತಾ ಇತ್ತೂ ಅಂತ"

"ಆ ಲೈಟ್ ಆಫೀಸ್‌ನಲ್ಲಿ ಇದ್ದಾನಲ್ಲ, ಆ ಲೈನ್ ಮ್ಯಾನ್ ಮೂಡಲಯ್ಯ, ಅವನ ಬೆನ್ನ ಮೇಲೆ"

ಪರೋಪಕಾರಾರ್ಥಂ.........

ವಸುಮತಿ ಉಡುಪ

'**ಸು**ಮ್ನೆ ಕೂರೋಕಾಗ್ದೆ ಮೈಮೇಲೆ ಇರುವೆ ಬಿಟ್ಕಂಡ್ರಂತೆ...ಅಂತ ನಮ್ಮಿತ್ಲಾಕಡೆ ಒಂದು ಮಾತುಂಟು. ಗಂಪು ಹಂಗಿದ್ದೋರನ್ನ ನೋಡಿಯೇ ಯಾರೋ ಬುದ್ಧಿವಂತ್ರು ಹುಟ್ಟುಹಾಕಿದ ಮಾತಿರ್ಬೇಕು. ಗಂಪು ಉರುಫ್ ಗಣಪತಿಗೆ ಜೀವನೋಪಾಯಕ್ಕೆ ಬ್ಯಾಂಕಿನ ನೌಕರಿ ಇತ್ತು. ಹೋತ್ತು ಕಳೆಯೋಕೆ ಮನೇಲಿ ಹೆಂಡ್ತಿ, ಮಕ್ಕಳು ಇದ್ರು. ಅಷ್ಟೂ ಸಾಕಾಗ್ಲಿಲ್ಲಪ್ಪಾಂದ್ರೆ ಟಿ. ವಿ. ರೇಡಿಯೋ, ಪೇಪರು, ಪುಸ್ತಕ ಇತ್ಯಾದಿ ಇತ್ಯಾದಿ ಇದ್ದೇ ಇದ್ವು. ಶಿವ ಕೊಟ್ಟಿದ್ದು ತಿಂದ್ಕಂಡು ರಾಮಾಕೃಷ್ಣಾಂತ ಹಾಯಾಗಿರಬಾರ್ದ್ವಾ ? ಗ್ರಾಸ್ತಂಗೆ ಪರರಿಗೆ ಉಪಕಾರ ಆಗುವಂತಾ ಏನಾದ್ರೂ ಒಂದಿಷ್ಟು, ಸೇವೆ ಮಾಡಿ ಹುಟ್ಟಿದ್ದು ಸಾರ್ಥಕಪಡಿಸ್ಕೊಬೇಕು ಅನ್ನೋ ಚಪಲ. ಈ ಚಪಲದ ಬೆನ್ನುಬಿದ್ದು ಅವನು ಮಾಡ್ಕೊಳ್ಳೋ ಫಜೀತಿ ಒಂದೆರಡಲ್ಲ. 'ಕೆಟ್ಟಮೇಲೆ ಬುದ್ದಿ ಬಂತು' ಅಂತ ಗಾದೆ ಉಂಟು. ಆದರೆ ಅದಕ್ಕೆ ಅಪವಾದಾನೂ ಇರ್ತಾರೆ ಅಂತ ಗಂಪೂನ ನೋಡಿದೋರು ಧಾರಾಳವಾಗಿ ಹೇಳ್ಬೋದು, ಪ್ರತಿಸಲ ಅವನು ಹೊಸಹೊಸದಾಗಿ ಕೆಡ್ತಾನೆ. ಹೊಸಹೊಸ ಬುದ್ಧಿ ಕಲೀತಾನೆ. ಇಗೊ, ಒಂದೆರಡು ಸ್ಯಾಂಪಲ್. ನಮ್ಮ ರೋಡಲ್ಲಿ ಮುನಿಸಿಪಾಲಿಟಿ ಕಸದ ತೊಟ್ಟಿ ಇಲ್ಲ. ಜನ ತಮ್ಮ ಮನೆ ಚೊಕ್ಕ ಮಾಡ್ಕಂಡು ಕಸದರಾಶೀನ ತಂದು ಎದ್ರುಮನೆ ಎದುರು ಸುರೀತಾರೆ. ಎದುರು ಮನೆಯೋರು ತಮ್ಮನೇ ಎದ್ರು, ರಾತ್ರೀಲಿ ಹೊತ್ತು ಕಾದು ಎಲ್ಲಾ ಮಲಗಿದಮೇಲೆ ಈ ಕೆಲಸ ಮಾಡೋ ಭೂಪರೂ ಉಂಟು. ಬರೀ ಕಸ ಆಗಿದ್ರೆ ಹಾಳಾಗ್ಲಿ ಅನ್ಬೋದಿತ್ತು. ಈ ಕಸದ ಜೊತೆ ಬಾಯಲ್ಲಿ ಆಡಬಾರದ್ದು, ಪೆನ್ನಲ್ಲಿ ಬರೀಬಾರದ್ದು ಇನ್ನೂ ಎಂತೆಂತೋ ಇರುತ್ತೆ. ಅರೀದ ಮಕ್ಕಳು ಆಟದ ಸಾಮಾನು ಅಂತ ಹೆರಕೋಕೆ ಹೋಗ್ತಾವೆ. ನರಕ ಸ್ವಾಮಿ ನರಕ, ಮತ್ತೆ ನೋಡೋಕೆ ಎಲ್ಲಾ ಮರ್ಯಾದಸ್ತ್ರು ಮಾಡೋದು......

ಇದಕ್ಕೊಂದು ಪರಿಹಾರ ಹುಡುಕ್ಲೇಬೇಕೂಂತ ಗಂಪು ಲೀಡರಶಿಪ್ ವಹಿಸ್ಕೊಂಡ. ಒಂದು ಅಹವಾಲು ಬರ್ದು ಎಲ್ಲಾ ಮನೆಯೋರ ಸಹಿ ಹಾಕಿಸ್ಕಂಡು ಮುನಿಸಿಪಾಲಿಟಿಗೆ ಹೋಗಿ ಖುದ್ದಾಗಿ ತಲುಪಿಸ್ದ. ಸ್ವಂತ ಕೆಲಸ ಬಿಟ್ಕಂಡು ಅಲ್ಲಿಗೆ ಪದೇ ಪದೇ ಅಲೆದ. ಅಂತೂ ಒಂದು ಶುಭದಿನ ಕಸದತೊಟ್ಟಿ ಬಂದೇ ಬಂತು.

ರಸ್ತೇ ತುದೀಲಿ ಸ್ಥಾಪನೆಯೂ ಆಯ್ತು. 'ನೋಡ್ದ್ಯಾ?' ಎಂದು ಗಂಪು ಬೀಗಿದ. 'ಇನ್ನು ನಮ್ಮ ರಸ್ತೆ ಅಂದ್ರೆ ಸಾಲಾಗಿ ಕೂತ್ಗಂಡು ಸಮಾರಾಧನೆ ಊಟ ಮಾಡ್ಬೋದು ಅಂತ ಕೊಚ್ಕೊಂಡ. ನಾಲ್ಕು ದಿನ ಜನ ಕಸ ತುಂಬ್ಕಂಡು ಹೋಗಿ ತೊಟ್ಟಿಗೇ ಸುರಿದು ಬಂದ್ರು, ಐದನೇ ದಿನ, ಅಭ್ಯಾಸ ಬಲ, ಆ ತುದೀಲಿರೋರಿಗೆ ಈ ತುದೀವ ರೆಗೆ ಬರೋಕೆ ಸೋಮಾರಿತನ, ಪರರಿಗೆ ಪೀಡೆ ಕೊಡೋದ್ರಲ್ಲಿ ಸಿಗೋ ವಿಚಿತ್ರ ಸಂತೋಷ, ಎಲ್ಲಾ ಸೇರ್ಕಂಡು ಕೆಲವರು ಮತ್ತೆ ಹಳೇ ಅಭ್ಯಾಸಕ್ಕೆ ಹೋದ್ರು. ಅವ್ರು ಮಾಡ್ತಾರೇಂತ ಇವ್ರು, ಇವ್ರು ಮಾಡ್ತಾರೇಂತ ಅವ್ರು, ಬೀದಿ ಯಥಾಪ್ರಕಾರ ಆಯ್ತು. ಗಂಪು ತನಗೆ ತಾನೇ ಲೀಡರಪಟ್ಟ ಕಟ್ಕೊಂಡಿದ್ನಲ್ಲ, ಅದು ಪೀಕಲಾಟಕ್ಕೆ ಬಂತು. ರಸ್ತೆ ಚೆನ್ನಾಗಿರ್ಬೇಕೂಂತ ಆಸೆ ಪಡ್ತಿದ್ದೋರು ಗಂಪೂನ ತರಾಟೆಗೆ ತಗಂಡ್ರು,

'ಏನ್ ಸ್ವಾಮಿ, ನೀವು ಸ್ವಲ್ಪ ಬುದ್ಧಿ ಹೇಳ್ಬಾರ್ದಾ ? ತೊಟ್ಟೀವಳಗೆ ಕಸಾ ಹಾಕಿದ್ರೆ ಕೈ ಸೇದಿ ಹೋಗುತ್ತಂತಾ ? ಸುಮ್ನೆ ಸಹಿಸ್ಕೊಂಡ್ರೆ ಈ ಜನ ತಲೇ ಮೇಲೆ ಕೂರ್ತಾರೆ' ಅಂತ ಗಂಪೂನ ಹುಡುಕ್ಕೊಂಡು ಬಂದು ಅವನ ತಲೆ ತಿಂದ್ರು. ಸ್ವತಃ ಅವರಿಗೆ ಬೇರೆಯೋರನ್ನ ಎದುರು ಹಾಕಿಕೊಳ್ಳೋ ಹಿಮ್ಮತ್ತಿಲ್ಲ. ಜಗಳ ಮಾಡೋ ತಾಕತ್ತಿಲ್ಲ. "ಹೊತ್ತಿಲ್ಲ ಗೊತ್ತಿಲ್ಲ ಬಂದು ಕೂತು ಅವರ ಚಾಡಿ ಇವರು, ಇವರ ಚಾಡಿ ಅವರು ಹೇಳಿದ್ದೇ ಹೇಳಿದ್ದು. ಕಸದ ಪ್ರಕರಣ ಒಂದು ನೆಪ. ಗಜ್ಜೂ, ಅದೇ ಗಜಲಕ್ಷ್ಮಿ, ಬಂದೋರಿಗೆ ಕಾಫಿ ಕೊಟ್ಟು ಕೊಟ್ಟು ರೋಸಿಹೋದ್ಲು 'ಊರ ದನ ಕಾದಿದ್ದು ಸಾಕು' ಅಂತ ಗಂಡಂಗೆ ಹುಕುಂ ಮಾಡಿದ್ಲು. ಕೊನೆಗೆ ಏನಾಯ್ತಪ್ಪಾಂದ್ರೆ ಏನೂ ಆಗ್ಲಿಲ್ಲ. ಎಲ್ಲಾ ಮೊದಲಿದ್ದಾಗೇ ಇತ್ತು.

'ಏನಕೇನ ಪ್ರಕಾರೇಣ...' ದ ಜನರು ನಮ್ಮೂರಲ್ಲೂ ಬೇಕಾದಷ್ಟಿದಾರೆ. ......ರವರು ರಕ್ತದ ಅವಶ್ಯಕತೆಯಿದ್ದ ರೋಗಿಯೊಬ್ಬರಿಗೆ ರಕ್ತದಾನ ಮಾಡಿದರು. ಇದು ಅವರ ನಲವತ್ತೊಂಭತ್ತನೆಯ ರಕ್ತದಾನ' ಎಂದು ಸ್ಥಳೀಯ ಪತ್ರಿಕೆಯಲ್ಲಿ ವರದಿಯಾಗುವಂತೆ,......ರವರು ಪ್ರಪ್ರಥಮಬಾರಿಗೆ ಸಾವು ಬದುಕಿನ ನಡುವೆ ಇದ್ದ ರೋಗಿಯೊಬ್ಬರಿಗೆ ರಕ್ತದಾನ ಮಾಡಿ ಜೀವ ಉಳಿಸಿದರು' ಎಂದು ಹಾಕಿಸಿಕೊಳ್ಳು ವವರೂ ಇದ್ದಾರೆ. ಇದನ್ನು ಸ್ವತಃ ಅವರೇ ಹಾಕಿಸಿಕೊಳ್ಳುತ್ತಿದ್ದರೋ ಅಥವಾ ಅವರ ಹಿಂಬಾಲಕರು ಹಾಕಿಸುತ್ತಿದ್ದರೋ ಗೊತ್ತಿಲ್ಲದಿದ್ದರೂ ಇಂತವನ್ನು ಓದಿ ಓದಿ ಗಂಪೂಗೆ ತಾನು ಯಾಕೆ ರಕ್ತದಾನಿಯಾಗಬಾರದು ಅನ್ನುವ ಮಹದಾಶೆ ಶುರು ವಾಯ್ತು. ಒಂದು ಜೀವ ಉಳಿಸುವುದೆಂದರೆ ಕಡಿಮೆ ಪುಣ್ಯದ ಕಾರ್ಯವೇ ? ಹುಳ ತಲೇಲಿ ಹೊಕ್ಕಿದ್ದೇ ಮಾಮೂಲಿನ ಹಾಗೆ ಗಜ್ಜು ಎದುರು ಪ್ಲೇಟ್ ಹಾಕಿದ. 'ರಕ್ತ

ದಾನ ಮಹಾದಾನ ಕಣೇ' ಅಂತ ಸ್ಲೋಗನ್ ಸೇರಿಸಿದ. ಬೇರೇ ಹೆಂಡತಿಯರಾಗಿದ್ರೆ ಗಂಡನ ಬಗ್ಗೆ ಎಷ್ಟು ಅಭಿಮಾನ ಅಡ್ತಿದ್ರೋ, ಗಜ್ಜು ಮೂಗು ಮೂರೀತಾ, ಗಂಡನ ಜೋತೆ ಮಾತಾಡ್ಬೇಕಾದಾಗಲೆಲ್ಲಾ ಹೀಗೆ ಮೂಗುಮೂರಿಯೋದು ಅವಳಿಗೆ ಅಭ್ಯಾಸ ಆಗ್ಬಿಟ್ಟಿದೆ, 'ಕನ್ನಡೀಲಿ ನಿಮ್ಮ ಮಕ ನೋಡ್ಕಂಡಿದೀರಾ ? ಯಾರರು ರಕ್ತ ಕೊಡೋರಿದ್ರೆ ಎರಡು ಬಾಟ್ಲಿ ಹಾಕಿಸ್ಗಂಬನ್ನಿ' ಅಂದ್ಲು. ಅವಳು ತೀರಾ ಸುಳ್ಳೇನೂ ಹೇಳಿರ್ಲಿಲ್ಲ ಅನ್ನಿ ಈ ಮುಖಭಂಗದಿಂದ ಗಂಪೂನ ಉಮೇದು ಕುಗ್ಗ ಲಿಲ್ಲ. 'ಒಳ್ಳೇ ಕೆಲಸಕ್ಕೆ ನೂರೆಂಟು ವಿಘ್ನ' ಅಂದ್ಕೊಂಡೋನೇ ಸೀದಾ ಹೋಗಿ ಆಸ್ಪತ್ರೇಲಿ ತನ್ನ ವಿಳಾಸ, ಫೋನ್ ನಂಬರು, ರಕ್ತದ ಗುಂಪು ಮುಂತಾದು ವನ್ನು ಬರೆಸಿ ಬಂದ. ಆಮೇಲೆ ಒಂದೇ ಚಡಪಡಿಕೆ. ಯಾರಿಗಾದ್ರೂ ಪ್ರಾಣ ಹೋಗು ವಂತಾ ಗಂಭೀರ ಖಾಯಿಲೆ ಬರ್ಬಾರ್ದ್ದಾ, ಅವರು ತನ್ನ ರಕ್ತದ ಗುಂಪಿನವರೇ ಆಗಿ ರ್ಬಾರ್ದ್ದಾ, ತುರ್ತಾಗಿ ರಕ್ತದಾನಕ್ಕೆ ಕರೀಬಾರ್ದಾ, ಅಂತ, ಬ್ಯಾಂಕಲ್ಲಿ ಫೋನ್ ಹೊಡೊಂಡಾಗ್ಗೆಲ್ಲಾ ಆಸಾಮಿ, 'ನಂಗಾ' ? ಅಂತ ಬಾಯ್ಬಿಟ್ಕೊಂಡು ಓಡ್ತಿದ್ದ. ಮೇನೇಜರ್ರು ಕೆಂಗಣ್ಣುಬಿಟ್ಟು. 'ನಿಮಗಾದ್ರೆ ಹೇಳಿ ಕಳಿಸ್ತೀನ್ರೀ' ಅಂತ ರೇಗ್ತಿದ್ರು. ಕೊನೆಗೂ ಅವನ ಮೊರೆ ದೇವರಿಗೆ ಮುಟ್ತು ಅನ್ನೊ ಹಾಗೆ ರಕ್ತದಾನಕ್ಕೆ ಕರೆ ಬಂದೇ ಬಂತು. ಗಂಪೂಗೆ ಇಂತಾ ಥರಾಂತಿಲ್ಲ. ಸಮರಭೂಮಿಗೆ ಹೊರಟ ವೀರನ ಹಾಗೆ ಎದೆ ಸೆಟೆಸ್ಕೊಂಡು ಎದುರಿಗೆ ಸಿಕ್ಕ ಗುರ್ತಿನೋರ ಹತ್ರ ಎಲ್ಲಾ ತಾನು ಹೋಗ್ತಿರೋ ಘನಂದಾರಿ ಕಾರ್ಯದ ಬಗ್ಗೆ ಹೇಳ್ಕಂಡು, ಆಸ್ಪತ್ರೆಗೆ ಹೋದ. ನರ್ಸ್ ಒಬ್ಬಳು ಎಲ್ಲಾ ಕೇಳ್ಕಂಡು, 'ಅಲ್ಲಿ ಕೂತಿರಿ' ಅಂತ ಬೆಂಚು ತೋರ್ಸಿದು. ಅಲ್ಲಿ ಆಗ್ಲೇ ಇಬ್ರು ಸೈಂಧವನ ಹಂಗೆದ್ದೋರು ಕಾಲಮೇಲೆ ಕಾಲುಹಾಕ್ಕಡು ಜಬರ್ದಸ್ತಾಗಿ ಕೂತಿದ್ರು. ಎರಡೂ ಪ್ರಾಯದ ಹುಡುಗರುಗಳು. ಇಂವ ಹೋಗಿ ಬೆಂಚಿನ ತುದೀಲಿ ಗುಬ್ಬಚ್ಚಿ ಮರಿ ಥರ ಕೂತ, ಆ ಪಕ್ಕದಲ್ಲಿ ಕೂತೋವೆರಡೂ ಮಾತಾಡ್ಕಂತಿದ್ವು.

'ಇನ್ನೂ ಬೇಕೂಫ ಬರ್ಲೇ ಇಲ್ಲಲ್ಲೊ ಆತ್ಲಾಗಿ ನಾನೇ ರಕ್ತ ಕೊಟ್ಬಿಡ್ಲಾ ಅಂತ ? ನಮ್ಮ ಮಾವನ ಮಗನೇ ತಾನೇ'

'ಸುಕಾಸುಮ್ನೆ ಯಾಕೆ ರಕ್ತ ಕಳ್ಕಂತೀಯೊ ? ಆ ನನ್ಮಗ ಬರ್ತೀನಿ ಅಂದಿದಾ ನಂತೆ. ಸ್ವಲ್ಪಹೋತ್ತು ಕಾಯೋಣ ಇರು. ತೆವಲಿದ್ದೋನಾ ಕೊಡ್ಲಿ'

ಗಂಪು ಬಂದಿದ್ದು ಇದೇ ಉದ್ದೇಶಕ್ಕೆ ಅಂತ ಅವನ ಆಕಾರ ನೋಡಿ ಅವರು ಖಂಡಿತಾ ಅಂದ್ಕಂಡಿರ್ಲಿಕ್ಕಿಲ್ಲ. ಅವರು ಯಾರನ್ನ ಉದ್ದೇಶಿಸಿ ಈ ಮಾತ್ನಾಡ್ತಿರ್ರೋ ಗಂಪೂಗೆ ಗೊತ್ತಿಲ್ಲ. ಆದ್ರೂ ಅವನು ಗಪಚಿಪ್ಪಾಗಿ ಅಲ್ಲಿಂದ ಜಾಗ ಖಾಲಿ ಮಾಡಿದ್ದು ಮಾತ್ರಾ ನಿಜಸಂಗತಿ.

ಜಾಹೀರಾತಿನ ಕಾರು

ಎಂ. ಎನ್. ಕೆ.

ಪೇಪರ್ ಓದ್ತಾ ಇದ್ದೆ. ಒಂದು ಹೆಸರಾಂತ ಬಹು ಬೆಲೆಯ ಮೋಟಾರ್ ಕಾರಿನ ಜಾಹೀರಾತು ಪ್ರಕಟವಾಗಿತ್ತು. "ಈ ವಾಹನದಲ್ಲಿ ಎಲ್ಲವೂ ಆಟೋಮ್ಯಾಟಿಕ್, ಟ್ರಾನ್ಸ್‌ಮಿಷನ್ ಆಟೋಮ್ಯಾಟಿಕ್, ಎಲ್ಲಾ ಬಾಗಿಲುಗಳು ಭದ್ರವಾಗುವುದು ಆಟೋಮ್ಯಾಟಿಕ್‌ನಿಂದ, ಗಾಜು ಏರುವುದು, ಇಳಿಯುವುದು ಆಟೋಮ್ಯಾಟಿಕ್, ರಿಯರ್‌ವ್ಯೂ ಕನ್ನಡಿಯೂ ಸಹ ಆಟೋಮ್ಯಾಟಿಕ್. ಈ ವಾಹನ ಅಂತಿಥವರಿಗಲ್ಲ. ಸಾಮಾನ್ಯ ಜನರಿಗಲ್ಲವೇ ಅಲ್ಲ. ಇದು **''ಎಕ್ಸ್‌ಕ್ಲೂಸೀವ್''** ಗುಂಪಿಗೆ ಮಾತ್ರ" ಎಂದಿತ್ತು. "ಎಲಾ ಈ ಕನ್ನಡಿಯನ್ನು ಹೀಗೆ ಹಾಗೆ ಮಾಡೋದಕ್ಕೆ ಆಟೋಮ್ಯಾಟಿಕ್ ಯಾಕೆ ಬೇಕು ? ಸ್ವಲ್ಪ ಕೈಲಿ ಆಡಿಸಿದರಾಗದೇ" ಎಂದಿತು ನನ್ನ ಅಲ್ಪ ಬುದ್ಧಿ. ತಕ್ಷಣವೇ ನನ್ನ ಮಹಾಬುದ್ಧಿ ನನಗೆ ಹಿತವಚನ ಹೇಳಿತು, ಈ ಅಲ್ಪ ಬುದ್ಧಿ ಮಾತು ಕೇಳೀ ಕೇಳೀನೇ ನೀ ಹೀಗಾಗಿದ್ದು. ಇನ್ನು ಮೇಲಾದರೂ ನಿನ್ನ ಮನಸ್ಸು ಸ್ವಲ್ಪ ಮೇಲೇರಲಿ, ನಿಂಗೆ ಇಷ್ಟೂ ಗೋತ್ತಾಗೋದಿಲ್ವೇನಪ್ಪಾ?. ಹತ್ತಾರು ಲಕ್ಷ ಕಾರಿನಮೇಲೆ ಸುರಿದು, ಕಾರಿನಲ್ಲಿ ಕೂತು ಎ. ಸಿ. ಆನ್ ಮಾಡಿ, ಆಟೋ ಮ್ಯಾಟಿಕ್ ಸಹಾಯದಿಂದ ಗಾಜೆಲ್ಲಾ ಮುಚ್ಚಿ, ಝುಂ ಅಂತ ಹೋಗುವಾಗ ಕೈಯಿಂದ ಕನ್ನಡಿ ಅಡ್ಜಸ್ ಮಾಡುಕ್ಕಾಗುತ್ತೇಪ್ಪ ? ಅಯ್ಯೋ ಹುಚ್ಚಪ್ಪ ! ನಿಂಗೆ ತಿಳುವಳಿಕೆ ಸಾಲ್ದಪ್ಪಾ" ಅಂದಿತು. ಸರಿ ಅನ್ನಿಸಿತು ಈ ವಾದ. ಈ ಆಟೋಮ್ಯಾಟಿಕ್ ಕನ್ನಡಿ ಬೇಕೇಬೇಕೆಂದು ಖಾತ್ರಿಯಾಯ್ತು. ಆಗ ಹಿಂದೆಂದೋ ಓದಿದ ಕಥೆ ಜ್ಞಾಪಕಕ್ಕೆ ಬಂತು. ಗಂಡ-ಹೆಂಡತಿ ಕಾರಿನಲ್ಲಿ ಹೋಗ್ತಿದ್ದಾರೆ. ಬೇಸಿಕೆ ಕಾಲ. ಉರಿ ಬಿಸಿಲು ಕಾರಿಗೆ ಎ ಸಿ ಗೀಸೀ ಏನೂ ಇಲ್ಲ. ಆದರೂ ಎಲ್ಲಾ ಗಾಜುಗಳೂ ಮುಚ್ಚಿವೆ. ಬೆವರುತ್ತಿದ್ದ ಹೆಂಡತಿ ಗಂಡನ್ನ ಕೇಳ್ತಾಳೆ" ಇದೇನ್ರೀ ನಿಂ ಹುಚ್ಚು, ಗಾಜು ಕೆಳಗಿಳಿಸಬಾರ್ದೆ"ಂತ ಗಂಡ ಹೇಳ್ತಾನೆ "ಅಯ್ಯೋ ಹುಚ್ಚೀ ನಿಂಗೆ ಅನುಭವಸಾಲ್ದಮ್ಮ ಗಾಜು ಕೆಳಗಿಳಿಸಿದೆ ರಸ್ತೇಲಿ ಹೋಗೋರ್‍ಗೆಲ್ಲ ನಂ ಕಾರ್‍ಗೆ ಎ ಸಿ ಇಲ್ಲಾಂತ ಗೊತ್ತಾಗೋಲ್ವ" ಶಹಬ್ಬಾಶ್ ವಾದ. ಮೈ ಬೆವರಿದ್ರೂ ಒಣ ಜಂಭ ಉಳೀತಲ್ಲಾ, ಅಷ್ಟೇ ಸಾಕು. ಸುಖ ಇಲ್ದಿದ್ರೂ ವ್ರತ್ತ ಉಳೀತು !.

ಒಬ್ಬ ಹೆಸರಾಂತ ಸಾಹಿತಿ ಒಂದು ಪಾರ್ಟೀಗೆ ಹೋದ್ರಂತೆ. ಬೇಕಾದಷ್ಟು ಜನ ಬಂದಿದ್ದರು. ಯಥಾಶಕ್ತಿ ಅವರವರ ಶ್ರೀಮಂತಿಕೆ ಪ್ರದರ್ಶನವಾಗುತ್ತಿತ್ತು.

ಮಣಗಟ್ಟಲೆ ಚಿನ್ನ, ವಜ, ಪ್ಲಾಟಿನಂ ಧರಿಸಿದ ಧಡೂತಿ ಹೆಂಗಸರು ಅತ್ತಿಂದಿತ್ತ ಓಡಾಡುತ್ತಿದ್ದರು. ಅಂಥವರಲ್ಲೊಬ್ಬಳು ಈ ನಮ್ಮ ಸಾಹಿತಿಯನ್ನು "ನಿಮ್ಮ ಕಾರು ಯಾವುದು" ಅಂದಳಂತೆ. ಇವರು "ನನ್ನದು ಅಂಬಾಸಿಡರ್, ನಿಮ್ಮದು ? ಎಂದು ಔಪಚಾರಿಕವಾಗಿ ಕೇಳಿದಾಗ ಆಕೆ "ನನ್ನದು BMW" ಎಂದು ಮುಗುಮ್ಮಾಗಿ ಹೇಳಿ ಮತ್ತೊಂದು ಮರ್ಸಿಡೀಸ್-ಟೊಯೋಟಾ-ಮಜ್ಡ-ರೋಲ್ಸ್‌ರಾಯ್ಸ್ ಗುಂಪಿನತ್ತ ಜಾರಿಕೊಂಡಳಂತೆ. ಈ ಶ್ರೀಮಂತ ಗುಂಪಿನವರು ಏನೇನು ಮಾತಾಡಬಹುದು ಎಂಬುದೇ ನನ್ನ ಕುತೂಹಲ, ರಾಜಕೀಯವೇ ? ಉಹುಂ ಇಲ್ಲ. ಇದು ಬರೀ ಬೋರು ಸಾಹಿತ್ಯ ವಿಮರ್ಶೆಯೇ ? ಸಾಧ್ಯವೇ ಇಲ್ಲ. ನಿಮಿಷ ನಿಮಿಷಕ್ಕೆ ಇಷ್ಟು ದುಡ್ಡೆಂದು ಸಂಪಾದಿಸುವ ಈ ನಮ್ಮ ನವ ಶ್ರೀಮಂತ ಮಹನೀಯ, ಮಹಿಳೆಯರಿಗೆ ಪುಸ್ತಕ ಓದಲು ಸಾಧ್ಯವೇ ?. ಇಲ್ಲವೇ ಇಲ್ಲ. ಅವರೇನು ಪಾಯಿಜಾಮ-ಜುಬ್ಬ-ಸವ ಸನ್ಯಾಸಿಗಡ್ಡದ ಶ್ರೀಸಾಮಾನ್ಯರೆ ?. ಅವರಾಡುವ ಸಂಭಾಷಣೆ ಈ ವಿಷಯಗಳಿರ ಬಹುದು :- ನಮ್ಮ ಕಾರ್ ಯಾವ ಪರದೇಶದಲ್ಲಿ ಕೊಂಡೆವು ? ಅದರ ಕಿಮ್ಮತೆಷ್ಟು ? ಹೋದವಾರ ಅವರು ಹೋಗಿದ್ದ ಪರದೇಶವಾವುದು. ಅಲ್ಲಿನ ಜನಪ್ರಿಯ ನೈಟ್ ಕ್ಲಬ್ ಹೇಗಿತ್ತು. ತಾವು ಇತ್ತೀಚೆಗೆಕೊಂಡು ತಂದ ಒಡವೆ, ಸೀರೆ, ಗಡಿಯಾರ ಗಳಾವುವು. ಕಸ್ಟಂಸ್‌ರವರಿಗೆ ಹೇಗೆ ಚಳ್ಳೇಹಣ್ಣು ತಿನ್ನಿಸಿದೆವು-ಯಾ-ಎಷ್ಟು ಸಂಭಾ ವನೆ ಕೊಟ್ಟೆವು-ತಮ್ಮ ಮನೆ ಕೆಲಸದವರು ಎಷ್ಟು ವಿಶ್ವಾಸ ಘಾತುಕರು. ಹೋದ ಸಲ ತಮ್ಮ ಮನೆ ಇನ್‌ಕಂಟ್ಯಾಕ್ಸ್ ರೈಡ್ ಆದಾಗ ಎಷ್ಟು ಲಕ್ಷ ಕಪ್ಪು ಹಣ ಸಿಕ್ಕಿತು. ಇತ್ಯಾದಿ-ಇತ್ಯಾದಿ. ಇಂಥಾ ಪಾರ್ಟಿಗೆ ನಾನೇನಾದ್ರೂ ಹೋಗಿ, ಆ ಹೆಂಗಸಿಗೆ ನಾನು ಆಟೋರೀಕ್ಷಾದಲ್ಲಿ ಬಂದೆ ಎಂದು ಹೇಳಿದ್ದರೆ ಆಕೆ ಮೂರ್ಛೆ ಹೋಗುತ್ತಿದ್ದಳೋ ಏನೋ. ರೋಲ್ಸ್-ಮರ್ಸಿಡೀಸ್-ಲೆಕ್ಸಸ್ ಗುಂಪಿನಲ್ಲಿ ಆಟೋ ? ಶಾಂತಂ-ಪಾಪಂ. ಶಾಂತಂ-ಪಾಪಂ. ದೇವರದಯ, ಪರಮಾತ್ಮ ದಯಾಮಯೀ ದೊಡ್ಡವನು, ಕರುಣಾ ಸಿಂಧು, ನನ್ನನ್ನು ಯಾರೂ ಅರೀತಿ ಪಾರ್ಟೀಗೆ ಕರಿಯದಂತೆ ಈ ವರೆವಿಗೆ ಕಾಪಾಡಿ ಕೊಂಡು ಬಂದಿದ್ದಾನೆ. ಜೈ ಭಗವಾನ್ !

ಈ ಮಹಿಳಾ ಮಣಿಗಳು ಕೇವಲ ಬಾಯಿ ಮಾತಿನಲ್ಲೇ ತಮ್ಮ ಕಾರುಗಳ ವಿವರಣೆ ಕೊಡಬೇಕು. ಕಾರನ್ನು ಪಾರ್ಟಿಗೆ ಒಳಗೆ ತರಕ್ಕಾಗುತ್ತದೆಯೇ ಈಗಂತೂ ಇಲ್ಲ. ಮುಂದೆಂದಾದರೂ ಈ ಡ್ರೈವಿನ್ ಸಿನಿಮಾ, ಡ್ರೈವಿನ್ ಪಾರ್ಟೀನೂ ಬರ ಬಹುದು. ಕಾದುನೋಡೋಣ. ಇದರಲೊಂದು ತೊಡಕಿದೆ, ಕಾರಿನ ಪ್ರದರ್ಶನ ವಾಗುವಾಗ ವಯ್ಯಕ್ತಿಕ ಆಭರಣ ಪ್ರದರ್ಶನ ಸಾಧ್ಯವಿಲ್ಲ. ಈ ಎರಡೂ ಪ್ರದರ್ಶನ ಏಕಕಾಲದಲ್ಲಿ ಸಾಧ್ಯವಾಗುವ ಯಾವುದಾದರು ಹೊಸ Invention ಬರುತ್ತೋ

ಏನೋ, ಕಾಯೋಣ.

ಇದೇ ಧಾಟಿಗೆ ಸೇರುವ ಮತ್ತೊಂದು ಕಥೆ ಜ್ಞಾಪಕಕ್ಕೆ ಬಂತು. ಇದನ್ನು ಒಬ್ಬ ಹೆಸರಾಂತ ಇಂಜಿನಿಯರ್ ಒಂದು ಸೆಮಿನಾರ್‌ಲೀ ಹೇಳಿದ್ದು. ಇಂಗ್ಲೇಂಡಿನಲ್ಲಿ ಒಬ್ಬ ಶ್ರೀಮಂತ ಮಹಿಳೆ ಒಬ್ಬ ಇಂಜಿನಿಯರ್ ಅನ್ನು ರೈಲಿನಲ್ಲಿ ಭೇಟಿಯಾಗುತ್ತಾಳೆ. ಬಹಳ ಹೈಲೆವಲ್ ಸಂಭಾಷಣೆ ನಡೆಯುತ್ತೆ. ಆ ಮಹಿಳೆ ರೈಲಿನಿಂದಇಳಿಯುವಾಗ "ಅಂದ್ಹಾಗೆ ನೀವು ಏನು ಕೆಲಸದಲ್ಲಿದ್ದೀರಿ" ಎಂದು ಔಪಚಾರಿಕವಾಗಿ ಕೇಳುತ್ತಾಳೆ. ಅವನು "ನಾನೊಬ್ಬ ಎಂಜಿನಿಯರ್" ಎಂದಾಗ ಆಕೆ ಬೆಚ್ಚಿ ಬಿದ್ದು "ಹಾಗಾದರೆ ನಾನು ಇಷ್ಟು ಹೋತ್ತೂ ಒಬ್ಬ ಇಂಜಿನಿಯರ್ ಜೊತೆ ಮಾತನಾಡುತ್ತಿದ್ದೆನೆ ? ನೀವೊಬ್ಬ ಜಂಟಲ್‌ಮನ್ ಎಂದು ಭಾವಿಸಿ ಎಡವಿಬಿಟ್ಟೆ" ಎಂದು ತುಂಬಾ ದುಗುಡದಿಂದ ಇಳಿದು ಹೋದಳಂತೆ, ನಮ್ಮ ಪಾರ್ಟಿಮಹಿಳೆಗೂ ಹೀಗೇ ಆಗಿರಬೇಕು-ಒಬ್ಬ ಕೇವಲ "ಅಂಬಾಸಿಡರ್" ಜೊತೆ ಮಾತಾಡಿದಾಗ.

ಈಗ ಆ ಕಾರಿನ ಜಾಹೀರಾತಿಗೆ ವಾಪಸ್ ಬರೋಣ. ಈ" ಕಾರು ಸಾಮಾನ್ಯರಿಗಲ್ಲ. exclusive ಜನರಿಗೆ" ಎಂದಿತ್ತು ಒಪ್ಪಿದೆ. ಖಂಡಿತ ಒಪ್ಪಿದೆ. ಸಾಮಾನ್ಯರಿಗೆಲ್ಲಿ ಎಟುಕುತ್ತೆ ಹದಿನೈದು ಲಕ್ಷದ ಕಾರು. ಆ ಪಾರ್ಟಿ ಮಹಿಳೆಗೇ ಸರಿ. ನಮ್ಮ ನವಶ್ರೀಮಂತ ಗುಂಪಿಗೇ ಸರಿ.

ವಯೋಧರ್ಮ, ಹಾಗೇ ಕಣ್ಣು ಮುಚ್ಚಿದೆ. ಸಹಜವಾಗಿ ಗತಕಾಲದ (1940-50 ದಶಕದ) ಕಾರಿನ ಸಮಾಜದತ್ತ ಹೊರಳಿತು ಮನಸ್ಸು. ಆಗ ಒಂದು ಗ್ಯಾಲನ್ (ಈಗಿನ 4.5 ಲೀಟರ್‌ಗೆ ಸಮ) ಬರ್ಮಾಶೆಲ್ ಪೆಟ್ರೋಲ್‌ಗೆ ಎಂಟಾಣೆ ಬೆಲೆ. (50 ಪೈಸೆ) ಎಷ್ಟೋ ಜನ ಒಂದೇ ಸಲ ಅರ್ಧ ಗ್ಯಾಲನ್ ಅಥವಾ ಪೂರ್ತಿ ಒಂದು ಗ್ಯಾಲನ್ ತುಂಬಿಸಿಕೊಳ್ಳುತ್ತಿದುದ್ದು ನಾನೇ ಕಣ್ಣಾರೆ ಕಂಡಿದ್ದೇನೆ ! ಅಂದಿನ ಕಾರ್‌ಗಳು 1939 ರ ಹಿಂದೆ Import ಮಾಡಿದವು. ಏಕೆಂದರೆ ಯುದ್ಧ ಕಾಲದಲ್ಲಿ ಈ ಹೊಸ ಕಾರ್‌ತಯಾರಿ ಇರುತ್ತಿದ್ದಿಲ್ಲ. ಆಗಿನ ಹೆಸರಾಂತ ಆಸ್ಟಿನ್-ಸ್ಟುಡೀಬೇಕರ್-ಫೋರ್ಡ್-ಕಾರುಗಳು ಈಗಲೂ ನೆನಪಿದೆ. ಈಗ ಅವುಗಳಲ್ಲಿ ಕೆಲವು ವಿಂಟೇಜ್ ಕಾರುಗಳಾಗಿ ವರ್ಷಕ್ಕೊಂದು ಬಾರಿ ರಸ್ತೆಗಿಳಿದು ಮತ್ತೆ ನಿದ್ರೆಗೆ ಹೊಗುತ್ತವೆ-ಅವು ರಸ್ತೆಗಿಳಿದಾಗ ರಿಟೈರ್ಡ್ ನಟಿಯರು ವಿಪರೀತ ಮೇಕಪ್ ಮಾಡಿಕೊಂಡರಾಗುವ ಭಾವನೆ ಉಂಟಾಗುತ್ತವೆ. 1930-40ರ ಆ ಕಾಲದ ಕಾರುಗಳ ಇಂಪು-ಸೊಂಪು

-ವಾಸನೆ ಆಕಾಲದಲ್ಲಿ ಆ ವಾಹನಗಳೊಡನೆ ಹೊಡೆದಾಡಿ, ಸ್ನೇಹ ಬೆಳಸಿ, ಪಳಗಿಸಿ ಪತೋಟಿಯಲ್ಲಿಟ್ಟು ಕೊಂಡಿದ್ದವರಿಗೇ ಗೊತ್ತು. ಅವರೆಲ್ಲ ಈಗ ವಿಂಟೇಜ್‌ಗಳಾಗಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಕೈಲಾಸಂ ಹೇಳಿದಹಾಗೆ ಆ ಕಾಲದ ಕಾರುಗಳೆಲ್ಲಾ ''Ox ವರ್ಡ್ ಮಾಡಲ್ ವಿತ್ ಸ್ಪೆಷಲ್ ಢಕಾಲೋ ಸಿಸ್ಟಂ"ಗಳು. ಆ ಕಾಲದಲ್ಲಿ self-starter ಒಂದು ಮರೀಚಿಕೆಯಾತ್ತು. ಹಾಂಡಲ್ ಹೊಡೆದೇ ಸ್ಟಾರ್ಟ್ ಮಾಡಬೇಕು. ಮಳೆ ಬಂದರೆ ಎಡಗೈಲಿ ಛತ್ರಿ, ಬಲಗೈಲಿ ಸ್ಟಾಟೀಂಗ್ ಹ್ಯಾಂಡಲ್ ! ಆ ಹ್ಯಾಂಡಲ್ ಮಿಸ್ ಆಗಿ ಮುಂಗೈಗೆ ಹೊಡೆದು ಕೈಮುರಿದು ಕೊಂಡವರೆಷ್ಟೋಮಂದಿ.

ನನ್ನ ಸಂಬಂಧಿಯೊಬ್ಬರು "ನೋಡ್ರೊ. ನನ್ನ ಕಾರಿಗೆ self starter ಹಾಕಿಸಿದ್ದೇನೆ" ಎಂದರು. ಆಶ್ಚರ್ಯದಿಂದ ಗುಂಪಾಗಿ ನೋಡಲು ಹೋದೆವು. ಅವರು ತಮ್ಮ ಡ್ರೈವಿಂಗ್ ಸೀಟಿನ ಕೆಳಗೆ ಮರದ ಹಲಗೆ ತೆಗೆದಿದ್ದರು. ತಮ್ಮ ಉದ್ದ ಕಾಲಿನಿಂದ ರಸ್ತೆ ತುಳಿದು ಕಾರನ್ನು ಇಳಿಜಾರಿನಲ್ಲಿ ಚಲಿಸಿ ಸ್ಟಾರ್ಟ್‌ಮಾಡಿ ಕೊಂಡರು. "ನಾನು ಯಾವಾಗಲೂ ಇಳಿಜಾರಿನಲ್ಲೇ ನಿಲ್ಲಿಸುತ್ತೇನೆ" ಎಂದರು. ಇವೇ ಅವರ ಢಕಾಲೋ-ಕಂ ಸೆಲ್ಫ್‌ಸ್ಟಾರ್ಟರ್, ಈ ಕಾರುಗಳಲ್ಲಿ ಮಳೆ ಬಂದರೆ ವೈಪರ್‌ರನ್ನೂ ಕೈಯಿಂದಲೇ ಚಲಿಸಬೇಕು. ಅದಕ್ಕೆ ನಮ್ಮಂತಹ ಕಿರಿಯರನ್ನು ಕಾರಿನಲ್ಲಿ ಕೂಡಿಸಿಕೊಂಡು ಹೋಗುತ್ತಿದ್ದರು ಈ ಅನುಕೂಲಸಿಂಧು ಹಿರಿಯರು.

ಆ ಕಾಲದಲ್ಲಿ ಹೊಸಕಾರಿನ ಬೆಲೆ ಸುಮಾರು ಏಳೆಂಟು ಸಾವಿರ. ಒಬ್ಬ ಸರ್ಕಾರಿ ಅಧಿಕಾರಿ ಒಂದು ಹೊಸ ಕಾರ್‌ಕೊಂಡು, 15 ದಿನದಲ್ಲೇ ಅದನ್ನು ಮಾರಿ ಮತ್ತೆ ಹಳೇ ಕಾರ್ ಕೊಂಡರು. ಅವರು ಕೊಟ್ಟ ಸಮಜಾಯಿಷೀ ಹೀಗಿತ್ತು. "ನೋಡಯ್ಯ ವಿಪರೀತ ಸಾಲ ಮಾಡಿಕೊಂಡು ಬಿಟ್ಟೆ. ರಾತ್ರಿಯೆಲ್ಲಾ ನಿದ್ದೇನೆ ಬರ್‍ತಿರಲಿಲ್ಲ. ಆಫೀಸಿನಲ್ಲೂ ಕೆಲಸವೇ ನಡೀತಿರಲಿಲ್ಲ. ಪದೇ ಪದೇ ಹೋಗಿ ಕಾರ್ ಸರಿಯಾಗಿದೇ ಯಾಂತ ನೋಡಿಕೊಂಡು ಬರೋಹಾಗಾಗುತ್ತಿತ್ತು. ಅದಕ್ಕೆ ಮಾರ್‍ಬಿಟ್ಟೆ, ಸಾಲ ತೀರಿಸಿ ಬಿಟ್ಟೆ ಈಗ ಹಾಯಾಗಿದ್ದೀನಿ". ಇವರ ಸಂಕಟ, ದುಗುಡ, ನಿರಾಶೆ, ಸೈಕಾಲಜಿ ಇಂದಿನ "ಲಂಚಮ್ಮದೇವೀ" ಕೃಪಾಪೋಶಿತ ನೌಕರ ಸಮಾಜಕ್ಕೆ ಅರ್ಥವಾಗುತ್ತಾ ? ಇಲ್ಲವೇ ಇಲ್ಲ. ನಮ್ಮ ಜಾಹೀರಾತಿನ "ಆಟೋಮ್ಯಾಟಿಕ್" ಕಾರಿನ ಬೆಲೆ 15ಲಕ್ಷ ಇರಬಹುದು. ಅದನ್ನು ತಮ್ಮ ಫ್ಲಾಟಿನ ಬೇಸ್‌ಮೆಂಟಲ್ಲಿ ಬಿಟ್ಟು ಹತ್ತನೇ ಮಹಡಿ

ಯಲ್ಲಿ ಮಲಗುವ ನವಶ್ರೀಮಂತ ದಂಪತಿಗಳಿಗೆ ನಿದ್ದೆ ಬರುವುದೇ ಇಲ್ಲಾ. ನಮ್ಮ 1940 ರ ಅಧಿಕಾರಿಯಂತೆ ಚಡಪಡಿಸುವರೇ ? ಭಗವಂತನೇ ಬಲ್ಲ.

"ಇದು ಎಲ್ಲರಿಗೂ ಅಲ್ಲ" ಜಾಹೀರಾತು ಖಂಡಿತ ಸರಿ, ನನಗಂತೂ ಅಲ್ಲವೆ ಅಲ್ಲ. ನನಗೆ ನನ್ನ ಹಳೇ "ಢಕಾಲೋ" ಮಾಡಲ್ ಸಾಕು ! ಅದರ ನೆನಪೇ ಸಾಕು ! ಜಾಹೀರಾತಿನ ಕಾರು ನನ್ನಂತಹವರಿಗೆ ಕನ್ನಡಿ ಗಂಟು !

ನೆಹರೂ ಹೇಳ್ತಾ ಇದ್ರು
ನಮ್ಮ ಪಾರ್ಟಿ ಇರೋದೇ
ಬಡ್ತನಾನ ನಿರ್ಮೂಲ ಮಾಡಕ್ಕೇಂತ
ಇಷ್ಟು ವರ್ಷ ಆದ್ಮೇಲೆ
ಈಗ ಗೊತ್ತಾಯ್ತು-ಅವರು
ಯಾರ ಬಡತನದ ಬಗ್ಗೆ ಹೇಳಿದ್ರೂ ಅಂತ।

ಎಸ್. ಆರ್. ರಮೇಶ್

ತುಸು ನಿಲ್ಲಿ ಇದು ದಿಲ್ಲಿ ಇದೇ ದಿಲ್ಲಿ.

ಶಿವರಾಮ ಕಾರಂತ

ಅಮಲು ಜಾರಿದ್ದು ಇಲ್ಲಿ
ಅಖಲು ಜಾರಿದ್ದೂ ಇಲ್ಲಿ.
ಈ ನೆಲವ ಆಳಿದವರೆಷ್ಟೆಷ್ಟೊ ಮಂದಿ
ಆಳಿದರು ಬಾಳಿದರು, ತೀರ ಕಳೆಗುಂದಿ.
ಆಳುವಾ ವೈಭವದಿ ಅಳಿದವರದೆಷ್ಟೊ,

ಆಳಿದರ ನೆರಳಲ್ಲಿ ನರಳಿದವರೆಷ್ಟೊ !
ಬಾಳಿನುದ್ದಕು ಗೋಳುಗರೆದವರದೆಷ್ಟೊ
ಎಂಬುದನು ಅರಿತೇರಿ ಕುತುಬನಾ ಕೊತ್ತಳವ
ಮೊದಲಲ್ಲ, ಮತ್ತಲ್ಲ ; ಎರಡರ ನಡುವೆ,
ಹೋಗುತೆ ಕೊತ್ತಳಿವ ಸುರುಳಿ ಸುತ್ತುತೆ ಸರಿವ

ಸೋಪಾನ ರಾಜಿಯನು ಬಿಸುಸುಯ್ದು ಏರಿ.
ತುತ್ತುದಿಯ ಎಟುಕುತಲಿ ದಿಟ್ಟಿ ಬೀರಿ :
'ಏನ್ ಚಂದ' 'ಏನ್ ಚೆಂದ' ಎನ್ನುವಾ ಮೊದಲೇ
ಇದ್ದಂತೆ ಇಲ್ಲದಾದರು ಹಲರು,
ಬಿದ್ದು ಜಾರಿ : ಬಿದ್ದೇ ಬಿದ್ದು ಜಾರಿ !

ಬಿದ್ದರೋ ಬೀಳಿಸಿದರೋ ಅದನರಿಯೆ ನಾನು,
ಸುದ್ದಿ ತಿಳಿಸಲು ಎಮಗೆ ಉಳಿದವರು ಇಲ್ಲ–
ಆ ಯಮಗೆ ತಿಳಿದಿರಬಹುದು ಎಲ್ಲ.
ಮುಂದೆ ನಡೆಯಿತು ಹಾಗೆ, ಹಿಂದೆಯೂ ಹಾಗೆ,
ಪಾಂಡುನಂದನರಿಂಗೆ ಕೌರವರು ಹಗೆಯಾಗೆ

ಅಂದು ನಡೆದುದೆ ಹಾಗೆ : ಮುಂದಕ್ಕು ಹಾಗೆ,
ಈ ದಿಲ್ಲಿ ಆ ದಿಲ್ಲಿ ಹಬ್ಬಿದಾ ನೆಲದಲ್ಲಿ
ಅರಸುಗಳ ಪೀಳಿಗೆಗೆ ಮುಕ್ತಾಯ ಅಲ್ಲಿ.
ದಿಲ್ಲಿ ಆಗಿರಲಿಲ್ಲ ನಿಜ ಧರ್ಮ ಭೂಮಿ ;
ಮಣ್ಣಿನಾ ಗುಣದಂತೆ ದುಷ್ಕರ್ಮ ಭೂಮಿ.

ಈ ನೆಲದ ಮೋಹಕ್ಕೆ, ಸಂತಸದ ದಾಹಕ್ಕೆ,
ಸೂರೆ ಮಾಡುವುದಕ್ಕೆ, ಊರಿಗೊಯ್ಯುವುದಕ್ಕೆ,
ರಕ್ತ ಹೀರುವುದಕ್ಕೆ, ಕೊಬ್ಬಿ ಮೆರೆವುದಕ್ಕೆ,
ಬಂದ ಭಂಡರು ಹಲರು, ಚಂಡಮುಂಡರು ಹಲರು !
ತಿಂದು ತೇಗಿದ ಬಳಿಕ, ಕುಂದಿ ನೆಲೆಸಿದರು

ಹಳೆಗಾಲ, ಮರೆತು ಬಿಡಿ, ನಿನ್ನೆಯಾ ಕತೆ ಕೇಳಿ–
ಶತಕದಂತ್ಯದ ಒಳಗೆ. ಬಿಳಿಯರಾಳಿಕೆ ಬಂತು !
ನವದಶಕದಂತ್ಯದಲ್ಲಿ ನಮ್ಮ ದೊರೆ ಬಿಳಿಯ !
ಜಾರ್ಜ್ ಪಂಚಮನವನು ದೊರೆರಾಯ ದಿಲ್ಲಿಯಲಿ
ಧರಿಸಿದನು ಮುಕುಟವನು ; ಅವಗೆ ಪಟ್ಟ !

ಬಾಗಿ ನಿಂತರು ಸುತ್ತ ರಾಜ ಮಾರಾಜಗಳು !
ಅವ ಮರಳಿದ್ದು ಲಂಡನಿಗೆ; ದಾಸ್ಯವೆಮಗೆ.
ಬಾಯಿ ಬಾರದ ಜನರು ಭಾರತದ ‘ಮಂದಿ’ಗಳು
ಬಿಡುಗಡೆಯು ಬೇಕೆಂದು ಕೂಗಿದರು ಬೆಂದು.
ಮುಷ್ಟಿಯಲಿ ಹಿಡಿದುದನು ಬಿಡುವರೇನವರು ?

ಅಂತಿಂಥ ಹೊತ್ತಿನಲಿ ನರಪೇತ ರೂಪದಲಿ
ನಿಂತ ನಮ್ಮವನೊಬ್ಬ ಗಾಂಧಿ ದಾಂಡಿಯಲಿ,
ಸಾಹುಕಾರ ಅವನಲ್ಲ ; ಅಸಹಕಾರಿ ತಾನಾದ
‘ತುಳಿದು ನಮ್ಮನು ಮೆಟ್ಟಿ ಆಳಬಿಡೆನೆಂದ’
ಹೇಗೆ ಬಂದಿತೊ ಬುದ್ಧಿ ! ಎಲ್ಲಿಂದ ಬಂತೊ !


ಬಿಳಿದೊರೆಯು ಸಾರಿದನು–ನರಿಯ ಉಪಾಯ
ಸೀಳಿ ರಾಜ್ಯವನೆರಡು- ಹಂಚಿ ಕೊಟ್ಟನು ಅದನು
ಮುಂದೆ ನಡೆದಾದುದನು ಬಲ್ಲಿರೇನು !
ಮಣ್ಣಿನಾ ಗುಣ ಬಿಡದ ದಿಲ್ಲಿ ಆಡಿತು ಆಟ-
ಗಾಂಧಿ ಉರುಳಿದ ನೆಲಕೆ - ಗುಂಡು ತಗಲಿ !

ಹೇಳ ಬೇಕೇನಿನ್ನು - ಮುಂದಣದ ಕತೆಯುನ್ನು !
ದಿಲ್ಲಿ ಎಂದರೆ ದಿಲ್ಲಿ ಅಲ್ಲಿಯಾ ಗಾಳಿಯಲಿ,
ಅಲ್ಲಿನಾ ನೀರಲ್ಲಿ, ಮತ್ತೆ ಎಲ್ಲೆಂದರಲ್ಲಿ,
ನವ ಶಕುನಿಯರ ಲೀಲೆ - ಹಬ್ಬಿತೆನ್ನಿ !
ಜವಹರನು ಅಳಿದನು· ಬಿಳಿ ಟೋಪಿ ದೊರೆಯಂತೆ,

ಅವನ ಕಾಲವು ಸರಿಯೆ, ಶಕುನಿಯರ ಸಂತೆ !
ಪ್ರಧಾನಿ ಪಟ್ಟದ ಶಾಸ್ತ್ರಿ, ದಿಲ್ಲಿಯನು ಬಿಟ್ಟವನು
ಮರಳಿ ಜೀವನ ಹಿಡಿದು ಮರಳಲಿಲ್ಲ !
ರಾಜ ವಂಶಾವಳಿಯ ಹಾದಿ ಹಿಡಿಯಿತು ದೇಶ–
ಇಂದಿರೆಯು ಏರಿದಳು ದಿಲ್ಲಿ ಪಟ್ಟ

ತನ್ನ ಗುಣ ಬಿಡಲಿಲ್ಲ ಆ ದಿಲ್ಲಿ ನೋಡಿ–
ಗುಂಡಿಗಾಹುತಿಯಾಗಿ ಉರುಳಿದಳು ನೆಲದಿ
ಮುಂದೆ ಆದದ್ದು ಅದೇ ಅದೇ ನೋಡಿ
ಅವಳ ಕಾಲದ ಬಳಿಕ ಆದುದಂತೆ !
ಪಟ್ಟವೇರಿದ ಮಗನು ಮರಳಿದನು ಶವವಾಗಿ

ಆದರೂ ಅಂಜದಿರಿ-ದಿಲ್ಲಿಗಿಲ್ಲವು ಭೀತಿ,
ಆ ನಲದಿ ಶಕುನಿಯರ ಕುಲ ಗೋತ್ರ
ಇಂದಿಗೂ ಅಳಿಯಲಿಲ್ಲ, ಅಳಿವಂತಿಲ್ಲ


ಕೋಟಿ ಕೋಟಿ ಗ್ರಾಹಕರ ಸಂತಸವೇ ನಮ್ಮ ಸ್ಫೂರ್ತಿ



Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.